# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 188 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 28.01.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 188 • PRGI No:KARKAN/2023/88055 • VIJAYANAGARA • 28.01.2025 • Tuesday • Page:04 • Rs:2








ಹಂಪಿ ಟೈಮ್ಸ್‌ನಲ್ಲಿ ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ ಸಂಪರ್ಕಿಸಿ

M:9448633038


# 15 ಕೋಟಿ ರೂ. ಅಧಿಕ ತೆರಿಗೆ ಪಾವತಿ ಬಾಕಿ ಬಿಎಂಎಂ ಕಾರ್ಖಾನೆಗೆ ನೋಟಿಸ್ ಜಾರಿಗೆ ಸೂಚನೆ

**ಕೆಡಿಪಿ ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಸೂಚನೆ | ಬಾಕಿ ಪ್ರಶ್ನೆ ಎತ್ತಿದ ಗ್ಯಾರಂಟಿ ಅನುಷ್ಟಾನ ಸಮಿತಿಯ ಜಿಲ್ಲಾಧ್ಯಕ್ಷ ಕುರಿ ಶಿವಮೂರ್ತಿ**

**ಹಂಪಿ ಉತ್ಸವ ಲೋಗೋ ಬಿಡುಗಡೆ | ಶಾಸಕರುಗಳಿಗೆ ಗೊತ್ತಿಲ್ಲದೆ ಬಸ್ ಬಿಟ್ಟ ಸಾರಿಗೆ ಅಧಿಕಾರಿಗಳು | ನಗರ ವಿದ್ಯಾರ್ಥಿಗಳು 2ಕಿಮೀ ಕಾಲ್ನಡಿಗೆಯಲ್ಲೆ ಶಾಲೆಗೆ**

**ಎಸ್ಸೆಸ್ಸೆಲ್ಸಿ, ಪಿಯುಸಿ ನಿರೀಕ್ಷಿತ ಫಲಿತಾಂಶ ಪ್ರಗತಿಗೆ ಶ್ರಮಿಸಿ | ವಿದ್ಯಾರ್ಥಿನಿಯರಿಗಾಗಿ ನಗರ ಸಾರಿಗೆ ಆರಂಭಿಸಲು ಸಚಿವರು, ಜಿಲ್ಲಾಧಿಕಾರಿ ಸೂಚನೆ**



**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಎಸ್ಸೆಸ್ಸೆಲ್ಸಿ, ಪಿಯುಸಿ ಫಲಿತಾಂಶ ಶೇ 85 ಕ್ಕಿಂತ ಹೆಚ್ಚಿನ ಪ್ರಗತಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಶ್ರಮಿಸಬೇಕಿದೆ ಎಂದು ವಸತಿ, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು. ಜಿಲ್ಲೆಯ ಎಲ್ಲಾ ಶಾಲಾ ಕಾಪೌಂಡು ನಿರ್ಮಾಣ, ಶೌಚಾಲಯ ಸೇರಿ ವಸತಿ ನಿಲಯದ ಕಟ್ಟಡಗಳ ಮಂಜೂರಾತಿ, ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಶೀಘ್ರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷರ ಸಮ್ಮುಖದಲ್ಲಿ ಎಲ್ಲಾ ಶಾಸಕರು, ಆಯಾ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅನುದಾನ ಒದಗಿಸುವ ಮೂಲಕ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುತ್ತದೆ ಎಂದರು.

**ಶಕ್ತಿ ಯೋಜನೆ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ಉಪವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಮಾತನಾಡಿ, ಶಕ್ತಿ ಯೋಜನೆಯಲ್ಲಿ ಹೊಸಪೇಟೆ ವಿಭಾಗದಲ್ಲಿ ಒಟ್ಟು 201 ಕೋಟಿ ರೂ ವೆಚ್ಚದಲ್ಲಿ 5.42 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು. ಗ್ಯಾರಂಟಿ ಅನುಷ್ಟಾನ ಸಮಿತಿಯ ಜಿಲ್ಲಾಧ್ಯಕ್ಷ ಕುರಿ ಶಿವಮೂರ್ತಿ ಮಾತನಾಡಿ, ಶಕ್ತಿಯೋಜನೆಯಿಂದ ಗ್ರಾಮೀಣ ಭಾಗದ ಮಹಿಳೆಯರಿಗೆ ಅನುಕೂಲವಾಗಿದೆ. ಆದರೆ ಪಟ್ಟಣದಲ್ಲಿನ ವಿದ್ಯಾರ್ಥಿಗಳಿಗೆ ಶಾಲಾ ಸಮಯಕ್ಕೆ ಬಸ್ ಕೊರತೆಯಿಂದ ಸಮಸ್ಯೆಯಾಗಿದ್ದು ಬಸ್‌ಗಳ ಸಂಖ್ಯೆ ಹೆಚ್ಚಿಸಿದರೇ ಮಾತ್ರ ಅನುಕೂಲವಾಗಲಿದೆ ಎಂದರು. ಸಚಿವರು ಮಾತನಾಡಿ ಹೊಸ ಬಸ್‌ಗಳ ಖರೀದಿಗೆ ಈಗಲೇ ಕ್ರೀಯಾ ಯೋಜನೆ ಸಲ್ಲಿಸಿ ಹೊಸ ಬಸ್‌ಗಳನ್ನು ಜಿಲ್ಲೆಗೆ ನೀಡಲಾಗುವುದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸಪೇಟೆ ನಗರ ಸಾರಿಗೆ ಸೌಲಭ್ಯ ಕಲ್ಪಿಸಲು ತಿಳಿಸಿ ಕಲ್ಯಾಣ ಕರ್ನಾಟಕ ಸಾರಿಗೆಗೆ ಹೆಚ್ಚಿನ ಬಸ್ ನೀಡಲು ಸಾರಿಗೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದಾಗ ಕೂಡ್ಲಿಗಿ ಶಾಸಕರಾದ ಡಾ; ಎನ್.ಟಿ.ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿಗಳಿಗೆ ನೀಡಿರುವ ಪಾಸ್‌ಗಳು ಕೇವಲ 50 ಕಿ.ಮೀ ಸಂಚರಿಸಬಹುದಾಗಿದೆ, ಆದರೆ ಕೂಡ್ಲಿಗಿಯಿಂದ ಚಿತ್ರದುರ್ಗಕ್ಕೆ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುತ್ತಿದ್ದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಿತಿ ಹೆಚ್ಚಿಸಲು ಸಚಿವರೊಂದಿಗೆ ಮಾತನಾಡುವೆ ಎಂದರು.

**ಯುವನಿಧಿ:** ಕೌಶಲ್ಯ ಅಭಿವೃದ್ಧಿ ಅಧಿಕಾರಿ ಪ್ರಾಣೇಶ್ ಮಾತನಾಡಿ, ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಂದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರಗಳನ್ನು ನಡೆಯುತ್ತಿವೆ. ಅರ್ಹರು ನೊಂದಾಣಿ ಪಡೆದು ತರಬೇತಿ ಹಾಜರಾಗುತ್ತಿದ್ದಾರೆ ಎಂದು ಸಭೆ ತಿಳಿಸಿದರು. ಅಧಿಕಾರಿಗಳ ಕೊರತೆ ಇದೆ ಸಭೆಯಲ್ಲಿ ಚರ್ಚಿಸಲಾಯಿತು. ಈಗಾಗಲೇ 16 ಇಲಾಖೆಗಳು ಜಿಲ್ಲೆಗೆ ತರಲು ಪ್ರಸ್ತಾವನೆ ಸಲ್ಲಿಸಲಾಗಿದ್ದು ಕಚೇರಿಯನ್ನು ಸ್ಥಾಪಿಸಲಾಗಿದೆ ಎಂದರು.




### ಬಾಕಿ ತೆರಿಗೆ ಪಾವತಿಗೆ ನೋಟಿಸ್

ಬಿಎಂಎಂ ಕಾರ್ಖಾನೆಯಿಂದ ಸ್ಥಳೀಯ ಗ್ರಾಪಂಗೆ ಪಾವತಿಸಬೇಕಾದ ತೆರಿಗೆ ಬಾಕಿ ಇದ್ದು, ಅಧಿಕಾರಿಗಳು ಯಾವುದೇ ಕ್ರಮವಹಿಸದಿರುವುದು ಗ್ರಾಪಂಗೆ ಅದಾಯ ರೂಪದಲ್ಲಿರುವ ತೆರಿಗೆ ಹಣ ಪಾವತಿಗೆ ವಿಳಂಬವೇಕೆಂದು ಪ್ರಸ್ತಾಪವಾಯಿತು ಈ ವೇಳೆ ಸಚಿವರು ಸೂಚನೆ ನೀಡಿ ಎರಡು ವರ್ಷದಿಂದ ಬಿಎಂಎಂ ಕಾರ್ಖಾನೆ 16 ಕೋಟಿ ಗ್ರಾಮ ಪಂಚಾಯಿತಿಗೆ ಪಾವತಿಸಬೇಕಾದ ತೆರಿಗೆ ಬಾಕಿ ಉಳಿಸಿಕೊಂಡಿದ್ದು ಅದರಲ್ಲಿ ರೂ.1.25 ಕೋಟಿ ಮಾತ್ರ ಪಾವತಿಸಲಾಗಿದೆ. ಉಳಿದ ಬಾಕಿಯನ್ನು ತಿಂಗಳಲ್ಲಿ ಪಾವತಿಸಲು ಅಂತಿಮ ನೋಟಿಸ್ ನೀಡಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಶಿಕ್ಷಣ ಇಲಾಖೆ : ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಮಾತನಾಡಿ, ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ 23,766 ವಿದ್ಯಾರ್ಥಿಗಳು ನೊಂದಾಣಿಯಾಗಿದ್ದಾರೆ. ಫಲಿತಾಂಶ ಸುಧಾರಣೆಗೆ ವಿಶೇಷ ತರಗತಿಗಳನ್ನು ಆಯೋಜಿ ಸಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಸಕ್ರಿಯ ಅಭ್ಯಾಸಕ್ಕೆ ಉತ್ತೇಜನ ನೀಡಲಾಗುತ್ತಿದೆ. ಪ್ರತಿ ಹದಿನೈದು ದಿನಕ್ಕೊಮ್ಮೆ ವಿಶೇಷ ಪರೀಕ್ಷೆ ಆಯೋಜಿಸಿ ಕಲಿಕಾಸಕ್ತಿ ಮೂಡಿಸಲಾಗಿದೆ ಎಂದರು. ಸಚಿವರು ಪ್ರತಿಕ್ರಿಯಿಸಿ ಹಿಂದಿನ ಬಾರಿ ಶೇ.65.6 ಫಲಿತಾಂಶ ಗಳಿಸಿತ್ತು. ಈ ಬಾರಿ ಶೇ.85 ಕ್ಕೂ ಹೆಚ್ಚು ಫಲಿತಾಂಶ ನೀರಿಕ್ಷೆ ಇದೆ. ಪಿಯುಸಿ ಶೆ.74% ಫಲಿತಾಂಶ ಪಡೆದಿತ್ತು. ಈ ಬಾರಿ ಶೇ.90 ರಷ್ಟು ಫಲಿತಾಂಶ ಪಡೆಯಲು ಅಧಿಕಾರಿಗಳು ಶ್ರಮಿಸಬೇಕು ಎಂದು ಸೂಚಿಸಿದರು.**

**ಕೃಷಿ ಇಲಾಖೆ :** ಈ ಬಾರಿ ಮಳೆ ಹೆಚ್ಚಾಗಿರುವುದರಿಂದ ಬಿತ್ತನೆ ವ್ಯಾಪ್ತಿ ಹೆಚ್ಚಾಗಿದೆ. ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕಗಳು ಅಗತ್ಯಕ್ಕೆ ತಕ್ಕಷ್ಟು ಸರಬರಾಜು ಆಗಿದೆ. ಜಲಾಶಯ ಇದ್ದರೂ ಸಹ ನೀರಾವರಿ ಆಧಾರಿತ ಕೃಷಿ ಭೂಮಿ ವಿಸ್ತೀರ್ಣ ಕಡಿಮೆ ಇದೆ. ಆದರೆ ಕೊಳವೆಬಾವಿ ಆಧಾರಿತ ಕೃಷಿ 78 ಸಾವಿರ ಎಕರೆಗಳಿಗಿಂತ ಹೆಚ್ಚಿದ್ದು ಈ ಬಗ್ಗೆ ಸರ್ಕಾರದ ಗಮನ ಸೆಳೆದು ಜಿಲ್ಲೆಗೆ ಹೆಚ್ಚಿನ ನೀರಾವರಿ ಕಲ್ಪಿಸುವ ಬಗ್ಗೆ ಚರ್ಚೆಯಾಯಿತು. ಮತ್ತು ಶಾಸಕರಾದ ಹೆಚ್.ಆರ್.ಗವಿಯಪ್ಪನವರು ಮಾತನಾಡಿ ಪಾಪಿನಾಯಕನಹಳ್ಳಿಯಿಂದ ಕೆರೆ ತುಂಬಿಸುವ ಯೋಜನೆಗೆ ತಳವಾರಘಟ್ಟದ ಬಳಿ ಜಾಕ್‌ವೆಲ್ ಹಾಕಿರುವುದರಿಂದ ಬೇಸಿಗೆ ಕಾಲದಲ್ಲಿ ಸಮರ್ಪಕ ನೀರಿಗಾಗಿ ಡ್ಯಾಂನಲ್ಲಿ ಜಾಕ್ ವೆಲ್ ಅಳವಡಿಸ ಬೇಕೆಂದು ಪ್ರಸ್ತಾಪಿಸಿದರು, ಇದಕ್ಕೆ ಸರ್ಕಾರದ ಹಂತದಲ್ಲಿ ಇದಕ್ಕೆ ಮಂಜೂರಾತಿ ಬೇಕಾಗಿದ್ದು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

**ಪಶು ಇಲಾಖೆ :** ಪಶು ಇಲಾಖೆ ಕುರಿಗಾಹಿಗಳ ಸಮಸ್ಯೆಯನ್ನು ಅರಿಯ ಬೇಕಿದೆ. ವಿವಿಧ ತಾಲೂಕಿನಲ್ಲಿ ಕುರಿಗಾಹಿಗಳಿಗೆ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಕುರಿ ಮೇಯಿಸಲು ಹೋದಾಗ ಅರಣ್ಯ ವೀಕ್ಷಕರಿಂದ ತೊಂದರೆ ಆಗುತ್ತಿದೆ. ವಿನಾಕಾರಣ ಕುರಿಗಾಹಿಗಳಿಗೆ ಕುರಿ ಮೇಯಿಸಲು ನಿರ್ಬಂಧ, ಕಿರುಕುಳ ನಡೆಯುತ್ತಿದೆ ಎಂದು ಚರ್ಚೆ ನಡೆಯಿತು. ಇದಕ್ಕೆ ಸಚಿವರು ಕುರಿಗಾಯಿಗಳ ಮೇಲೆ ಯಾವುದೇ ಕಾರಣಕ್ಕೂ ದೌರ್ಜನ್ಯವೆಸಗುವಂತಿಲ್ಲ, ಅರಣ್ಯ ಪ್ರದೇಶದಲ್ಲಿಯು ಸಹ ಕುರಿಗಳನ್ನು ಮೇಯಿಸಲು ಬಂದಾಗ ಅವರ ಮೇಲೆ ಪ್ರಕರಣ ದಾಖಲಿಸುವ ಕೆಲಸ ಮಾಡಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ವೇಳೆ ಜಿಲ್ಲಾಧಿಕಾರಿಯವರು ಮಾತನಾಡಿ ಕುರಿಗಾಯಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಯಾದರೇ ದೂರು ನೀಡಿ ಪ್ರಕರಣ ದಾಖಲಿಸಬಹುದು. ಕುರಿಗಾಹಿಗಳಿಗೆ ನಿಯಮಾನುಸಾರ ಗನ್ ಲೈಸನ್ಸ್ ನೀಡಲಾಗುವುದು. ಅಗತ್ಯವಿದ್ದರೇ ಅರ್ಜಿ ಸಲ್ಲಿಸಿ ಪಡೆಯಬಹುದು ಎಂದು ತಿಳಿಸಿದರು.


**ಸಮಾಜ ಕಲ್ಯಾಣ ಇಲಾಖೆ :** ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆಗೆ ಹೆಚ್ಚುವರಿ ವಸತಿ ನಿಲಯಗಳ ಅಗತ್ಯವಿದೆ. ಕೆಲವು ಬಾಡಿಗೆ ಆಧಾರಿತ ಕಟ್ಟಡದಲ್ಲಿರುವ ವಸತಿ ನಿಲಯಗಳಿಗೆ ಸ್ವಂತಕಟ್ಟಡ ನಿರ್ಮಾಣಕ್ಕೆ ಅನುದಾನ ಅಗತ್ಯವಿದೆ ಎಂದಾಗ ಸಮಾಜ ಕಲ್ಯಾಣ ಇಲಾಖೆ ಸಚಿವರು ಮತ್ತು ಕೆಕೆಆರ್‌ಡಿಬಿ ಯಿಂದ ಅನುದಾನ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

**ಅಲ್ಪಸಂಖ್ಯಾತ ಇಲಾಖೆ :** ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ ಮಾತನಾಡಿ, ಹರಪನಹಳ್ಳಿಯಲ್ಲಿನ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಕಿಚನ್‌ನಲ್ಲಿ ಮಲಗುತ್ತಿದ್ದಾರೆಂದು ಪತ್ರಿಕಾ ವರದಿ ಯಾದ ಬಗ್ಗೆ ಚರ್ಚೆ ನಡೆಸಲಾಯಿತು. ಹಡಗಲಿ ಶಾಸಕ ಕೃಷ್ಣನಾಯ್ಕ ಮಾತನಾಡಿ, ಹಡಗಲಿ ತಾಲೂಕಿನಲ್ಲಿ ಅನೇಕ ವಸತಿ ನಿಲಯಗಳು ಶೀಥಿಲಾವಸ್ಥೆಯಲ್ಲಿವೆ. ದುರಸ್ಥಿಗೆ ಅಧಿಕಾರಿಗಳು ಮುಂದಾಗಬೇಕು ಎಂದರು. ಇದಕ್ಕೆ ಸಚಿವರು ಹೊಸ ಕಟ್ಟಡ ಕಾಮಗಾರಿ ನಡೆಯುತ್ತಿದ್ದು ಆದಷ್ಟು ಬೇಗ ಮುಗಿಸಿ ಸ್ಥಳಾಂತರಿಸಲು ಸೂಚನೆ ನೀಡಿ ದುರಸ್ಥಿ ಮಾಡಬೇಕಾದ ಹಾಸ್ಟೆಲ್‌ಗಳಿಗೆ ಅನುದಾನ ಒದಗಿಸಿಕೊಡಲಾಗುತ್ತದೆ.

ಅಲ್ಪಸಂಖ್ಯಾತರ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಪ್ರವೇಶ ಕಲ್ಪಿಸಿಕೊಡಬೇಕು, ನಿಯಮದ ಪ್ರಕಾರ ಇತರೆ ವಿದ್ಯಾರ್ಥಿಗಳಿಗೆ ಶೇ 25 ರಷ್ಟು ನೀಡಿ ಉಳಿದ ಸ್ಥಾನಗಳನ್ನು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ನೀಡಬೇಕು. ಹೆಚ್ಚುವರಿಯಾಗಿ ಪ್ರವೇಶ ಪಡೆದರೂ ಅನುಮತಿ ನೀಡಲಾಗುತ್ತದೆ, ಯಾವುದೇ ಕಾರಣಕ್ಕೂ ಪ್ರವೇಶ ನೀಡದೇ ನಿರಾಕರಿಸಬಾರದೆಂದರು.

**ಹಂಪಿ ಉತ್ಸವ ಲೋಗೋ ಬಿಡುಗಡೆ:** ವಿಶ್ವವಿಖ್ಯಾತ ಹಂಪಿ ಉತ್ಸವ ಫೆ.28 ರಿಂದ ಮಾರ್ಚ್ 1 ಮತ್ತು 2 ರಂದು ಜರುಗಲಿರುವ ಹಂಪಿ ಉತ್ಸವದ ಲೋಗೋವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಬಿಡುಗಡೆಗೊಳಿಸಿ ಮಾತನಾಡಿ, ಹಿಂದಿನ ವರ್ಷ ಜಿಲ್ಲಾಡಳಿತ ಹಾಗೂ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಮಾಧ್ಯಮ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಯಶಸ್ವಿಯಾಗಿ ಉತ್ಸವ ನಡೆಸಲಾಯಿತು.ಈ ಬಾರಿ ಇನ್ನಷ್ಟು ವಿಜೃಂಭಣೆಯಿಂದ ಇಡೀ ರಾಜ್ಯದ ಗಮನಸೆಳೆವ ನಿಟ್ಟಿನಲ್ಲಿ ಹಂಪಿ ಉತ್ಸವ ಆಯೋಜಿಸಲು ನಿಮ್ಮೆಲ್ಲರ ಸಹಕಾರವಿರಲಿ. ಉತ್ಸವದ ಎಲ್ಲಾ ಕೆಲಸಗಳಲ್ಲಿ ಅಧಿಕಾರಿಗಳ ಆಸಕ್ತಿಯಿಂದ ಭಾಗವಹಿಸುವಂತೆ ತಿಳಿಸಿದರು.

ಹೊಸಪೇಟೆ ಶಾಸಕ ಹೆಚ್.ಆರ್.ಗವಿಯಪ್ಪ, ಕೂಡ್ಲಿಗಿ ಶಾಸಕ ಡಾ;ಎನ್.ಟಿ.ಶ್ರೀನಿವಾಸ್, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜನಾಯ್ಕ, ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ, ಹೂವಿನಹಡಗಲಿ ಶಾಸಕ ಕೃಷ್ಣನಾಯ್ಕ, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಹೆಚ್ಚುವರಿ ಪೊಲೀಸ್ ಉಪ ವರಿಷ್ಠಾಧಿಕಾರಿ ಸಲೀಂ ಪಾಷಾ ವೇದಿಕೆಯಲ್ಲಿದ್ದರು. ಸಭೆಯಲ್ಲಿ ನಾಮನಿರ್ದೇಶಿತ ಸದಸ್ಯರಾದ ಹೆಚ್.ಕಾಳಪ್ಪ, ಬಸವಲಿಂಗಪ್ಪ ಮೇಟಿ, ಹಾಗು ಹೆಚ್.ಗವಿಯಣ್ಣ, ಜಿ.ಸಿದ್ದಮ್ಮ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಕುರಿ ಶಿವಮೂರ್ತಿ, ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಸಹಾಯಕ ಆಯುಕ್ತರಾದ ವಿವೇಕಾನಂದ, ಚಿದಾನಂದ ಗುರುಸ್ವಾಮಿ, ತಹಶೀಲ್ದಾರರು, ಅಧಿಕಾರಿಗಳು ಭಾಗವಹಿಸಿದ್ದರು.



### ಆನಂದ ಬಾಣ




## ಜ.29 ರಂದು ಕೊಟ್ಟೂರು ರಥೋತ್ಸವ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಫೆ.22 ರಂದು ಜರುಗಲಿರುವ ಜಿಲ್ಲೆಯ ಕೊಟ್ಟೂರು ಶ್ರೀಗುರುಬಸವೇಶ್ವಸ್ವಾಮಿ ದೇವಸ್ಥಾನದ ರಥೋತ್ಸವ ಮತ್ತು ಜಾತ್ರೋತ್ಸವ ನಿಮಿತ್ತ ಜ.29ರಂದು ಪೂರ್ವಸಿದ್ದತಾ ಸಭೆಯನ್ನು ಆಯೋಜಿಸಲಾಗಿದೆ ಎಂದು ಶ್ರೀಗುರುಬಸವೇಶ್ವರ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಜ.29 ರಂದು ಬೆಳಿಗ್ಗೆ 11 ಗಂಟೆಗೆ ಸಭೆಯನ್ನು ಏರ್ಪಡಿಸಲಾಗಿದೆ. ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ನೇಮಿರಾಜನಾಯ್ಕ, ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್‌ರವರ ಅಧ್ಯಕ್ಷತೆಯಲ್ಲಿ ಜಾತ್ರಾ ಪೂರ್ವಭಾವಿ ಸಿದ್ಧತಾ ಸಭೆ ನಡೆಯಲ್ಲಿದೆ. ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಸಲುವಾಗಿ ವಿವಿಧ ಇಲಾಖೆಯವರು ಕೈಗೊಂಡಿರುವ ಕ್ರಮಗಳ ಅಗತ್ಯ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೊಟ್ಟೂರು ಕ್ರಿಯೇಟಿವ್ ಲೇಡಿಸ್ ಕ್ಲಬ್ 25ನೇ ವರ್ಷದ ಸಂಭ್ರಮಾಚರಣೆ

**ಹಂಪಿ ಟೈಮ್ಸ್ ಕೊಟ್ಟೂರು.**

ಕೊಟ್ಟೂರಿನ "ಕ್ರಿಯೇಟಿವ್ ಲೇಡಿಸ್ ಕ್ಲಬ್" ಅನೇಕ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಹಲವು ಅಡೆ ತಡೆಗಳೊಂದಿಗೆ ತನ್ನದೇ ಆದಂತಹ ಉತ್ತಮ ಸೇವೆಗಳನ್ನು ಸಮಾಜಕ್ಕೆ ಕೊಟ್ಟು ಇಂದು 25ನೇ ವರ್ಷದ ಸಂಭ್ರಮದಲ್ಲಿದೆಅ ಈ ಸಂಸ್ಥೆ ಸದಸ್ಯರ ಕಾರ್ಯ ಶ್ಲಾಘನೀಯ ಎಂದು ಕ್ಷೇತ್ರದ ಶಾಸಕ ನೇಮಿರಾಜ್ ನಾಯ್ಕ್ ಪ್ರಶಂಸೆ ವ್ಯಕ್ತಪಡಿಸಿದರು.


ಪಟ್ಟಣದ ಮರುಳಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ಸಂಜೆ ಕೊಟ್ಟೂರಿನ ಕ್ರಿಯೇಟಿವ್ ಲೇಡಿಸ್ ಅಸೋಸಿಯೇಷನ್ ಆಯೋಜಿಸಿದ್ದ ಲೇಡಿಸ್ ಕ್ಲಬ್ ನ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಸ್ತ್ರೀ ಸಮಾಜದ ಕಣ್ಣು ಸಮಾಜದ ಒಳತಿಗಾಗಿ 25 ವರ್ಷಗಳಲ್ಲಿ ಸಂಸ್ಥೆಯ ಸಹೋದರಿಯರು ಮಹತ್ವದ ಕಾರ್ಯಗಳನ್ನು ಕೈಗೊಂಡಿದ್ದಾರೆ ಆದೇ ರೀತಿ ಮುಂದಿಯೂ ಜಾತ್ಯಾತೀತವಾಗಿ ,ಪಕ್ಷತೀತವಾಗಿ ಉತ್ತಮ ಕಾರ್ಯಗಳನ್ನು ಕೈಗೊಳ್ಳುವಂತಹ ಶಕ್ತಿ ಸಂಸ್ಥೆಗೆ ಬರಲಿ 50–100 ವರ್ಷಗಳ ಸಂಭ್ರಮ ಆಚರಿಸಿಕೊಳ್ಳುವಂತಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ತಹಶಿಲ್ದಾರ ಅಮರೇಶ್ ಜಿ.ಕೆ ,ಡಿಎಸ್‌ಎಸ್ ಮುಖಂಡರು ಬದ್ದಿ ಮರಿಸ್ವಾಮಿ,ಅಂಚೆ ಕೊಟ್ರೇಶ್, >>4ಚ

## ಗರ್ಭಿಣಿಯರಲ್ಲಿ ರಕ್ತಹೀನತೆ ಇದ್ದಲ್ಲಿ ನಿರ್ಲಕ್ಷಿಸಬೇಡಿ

### ಉಚಿತ ಎಫ್‌ಸಿಎಮ್ ಚುಚ್ಚುಮದ್ದು ತಪ್ಪದೇ ಪಡೆಯಿರಿ : ಡಿಎಚ್‌ಒ



**ಹಂಪಿ ಟೈಮ್ಸ್ ಬಳ್ಳಾರಿ**

ಗರ್ಭಿಣಿಯರಲ್ಲಿ ರಕ್ತಹೀನತೆ ಇದ್ದಲ್ಲಿ ನಿರ್ಲಕ್ಷಿಸಬಾರದು. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಎಫ್‌ಸಿಎಮ್ ಚುಚ್ಚುಮದ್ದು ಹಾಕಿಸಿ ರಕ್ತಹೀನತೆ ತಡೆಗೆ ಮುಂದಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಸಿರುಗುಪ್ಪ ಪಟ್ಟಣದ ಹೊರವಲಯದ ವಲಸೆ ಜನವಿರುವ ಸಿದ್ದಪ್ಪ ನಗರಕ್ಕೆ ಗರ್ಭಿಣಿ ಮಹಿಳೆಯರ ಮನೆ ಭೇಟಿ ಮಾಡಿ ಸ್ಥಳೀಯ ಜನತೆಯೊಂದಿಗೆ ಅವರು ಮಾತನಾಡಿದರು.

ಮನೆಯಲ್ಲಿ ಗರ್ಭಿಣಿಯಿದ್ದರೆ ಅವರು ಮನೆಯ ಮಗಳಾಗಿರಲಿ ಅಥವಾ ಸೊಸೆಯಾಗಿರಲಿ ಯಾವುದೇ ಕಾರಣಕ್ಕೂ ರಕ್ತಹೀನತೆಯಾಗದಂತೆ ಕಾಳಜಿ ವಹಿಸಬೇಕು. ಈ ದಿಶೆಯಲ್ಲಿ ದುಬಾರಿಯಾದ ಎಫ್.ಸಿ. ಎಮ್ ಚುಚ್ಚುಮದ್ದನ್ನು ಎಲ್ಲ >>4

## ಗೃಹ ಬಳಕೆಯ ಅನಿಲ ಸಿಲಿಂಡರ್‌ಗಳನ್ನು 5 ಕಿ.ಮೀ ಒಳಗೆ ಉಚಿತ ಸರಬರಾಜು

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿನ ಎಲ್ಲಾ ಅನಿಲ ವಿತರಕರು, ಗೃಹ ಬಳಕೆಯ ಭರ್ತಿ ಮಾಡಿದ ಅನಿಲ ಸಿಲಿಂಡರ್‌ಗಳನ್ನು ಗ್ರಾಹಕರಿಗೆ ಸಾಗಾಣಿಕೆ ಮಾಡುವಾಗ 5 ಕಿ.ಮೀ ಒಳಗೆ ಉಚಿತವಾಗಿ ಸರಬರಾಜು ಮಾಡಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ವ್ಯವಹಾರಗಳ ಇಲಾಖೆಗಳ ಉಪನಿರ್ದೇಶಕ ಸಕೀನಾ ಅವರು ತಿಳಿಸಿದ್ದಾರೆ.

5 ಕಿ.ಮೀ ನಂತರದ ಪ್ರತಿ ಕಿ.ಮೀ ರೌಂಡ್ ಟ್ರಿಪ್ ಗೆ ಪ್ರತಿ ಸಿಲಿಂಡರ್‌ಗೆ ರೂ.1.60 ತೆಗೆದುಕೊಳ್ಳಬೇಕು. ತಪ್ಪಿದ್ದಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಪೂರೈಕೆ ಮತ್ತು ವಿತರಣೆಯ ನಿಯಂತ್ರಣ) ಆದೇಶ 2000 ರ ರೀತ್ಯಾ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತಾಯಿ ಭುವನೇಶ್ವರಿಯ ಪುತ್ಥಳಿ ವಿಧಾನ ಸೌಧದಲ್ಲಿ ಸ್ಥಾಪಿಸಿದ್ದು ಸಮಸ್ತ ಕನ್ನಡಿಗರ ಹೆಮ್ಮೆಯ ದಿನ

# ಎಲ್ಲಾ ಭಾಷೆ ಪ್ರೀತಿಸಬೇಕು ಕನ್ನಡವನ್ನು ಮಾತ್ರ ಬಳಸಿ, ಬೆಳೆಸಿ, ಬೆಳಗಬೇಕು : ಸಿಎಂ



■ **ಹಂಪಿ ಟೈಮ್ಸ್ ಬೆಂಗಳೂರು**

ನಾವು ಎಲ್ಲಾ ಭಾಷೆಗಳನ್ನು ಪ್ರೀತಿಸಬೇಕು. ಕನ್ನಡವನ್ನು ಮಾತ್ರ ಬಳಸಬೇಕು, ಬೆಳೆಸಬೇಕು, ಬೆಳಗಬೇಕು ಎಂದು ಸಿ.ಎಂ ಸಿದ್ದರಾಮಯ್ಯ ಅವರು ಕರೆ ನೀಡಿದರು.

ವಿಧಾನಸೌಧದ ಆವರಣದಲ್ಲಿ ತಾಯಿ ಭುವನೇಶ್ವರಿಯ ವೈಭವದ ಪುತ್ಥಳಿಯನ್ನು ಅನಾವರಣಗೊಳಿಸಿ ಮಾತನಾಡಿದರು. ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಎಂದು ನಾಮಕರಣ ಮಾಡಿದರು. 2023 ಕ್ಕೆ ಈ ನಾಮಕರಣ ಆಗಿ 50 ವರ್ಷ ತುಂಬಿದರೂ ಆಗಿನ ಬಿಜೆಪಿ ಸರ್ಕಾರ ಈ ಸುವರ್ಣೋತ್ಸವವನ್ನು ಬೇಕಂತಲೇ ಕೈಬಿಟ್ಟರು. ಆದರೆ ನಾವು ಅಧಿಕಾರಕ್ಕೆ ಬಂದು ಒಂದು ವರ್ಷ ಲೇಟಾದರೂ ಕರ್ನಾಟಕದ ಸುವರ್ಣೋತ್ಸವವನ್ನು ಆರಂಭಿಸಿ ಇಡೀ ವರ್ಷ ಆಚರಿಸಲು ನಿರ್ಧರಿಸಿದೆವು. ಕನ್ನಡ ಭಾಷೆ, ಸಂಸ್ಕೃತಿ ವಿಚಾರದಲ್ಲಿ ಇದು ನಮ್ಮ ಬದ್ಧತೆ ಎಂದು ಸ್ಪಷ್ಟಪಡಿಸಿದರು. ಕನ್ನಡ ಭಾಷೆ, ಸಂಸ್ಕೃತಿ, ಕಲೆಯನ್ನು ರಾಜ್ಯದ ಪ್ರತಿಯೊಬ್ಬರೂ ಅಭಿಮಾನ ಬೆಳೆಸಿಕೊಳ್ಳಬೇಕು. ಹೆಸರಾಯಿತು ಕರ್ನಾಟಕ–ಉಸಿರಾಗಲಿ ಕರ್ನಾಟಕ ಎನ್ನುವುದು ನಮ್ಮ ನಿಮ್ಮೆಲ್ಲರ ಅಭಿಮಾನವಾಗವಾಗಬೇಕು. ಆಗ ಮಾತ್ರ ಕನ್ನಡ ಸಾರ್ವಭೌಮಭಾಷೆಯಾಗುತ್ತದೆ ಎಂದರು.

ನಾವು ಎಲ್ಲಾ ಭಾಷೆಗಳನ್ನು ಪ್ರೀತಿಸಬೇಕು. ಕನ್ನಡವನ್ನು ಬಳಸಬೇಕು, ಬೆಳೆಸಬೇಕು, ಬೆಳಗಬೇಕು. ನಾವು ನಮ್ಮ ಸಹೋದರ ಮತ್ತು ಇತರೆ ಭಾಷಿಕರ ಜೊತೆ ಕನ್ನಡದಲ್ಲಿ ಮಾತನಡುವ, ವ್ಯವಹರಿಸುವ ಸಂಸ್ಕೃತಿಯನ್ನು ಪಾಲಿಸಬೇಕು ಎಂದು ಕರೆ ನೀಡಿದರು.

**ಕನ್ನಡಪರ ಹೋರಾಟಗಾರರ ಎಲ್ಲಾ ಕೇಸ್ ವಾಪಾಸ್:**

ಕನ್ನಡಪರ ಹೋರಾಟಗಾರರ ಎಲ್ಲಾ ಕೇಸ್ ವಾಪಾಸ್ ಪಡೆಯಲಾಗುವುದು ಎಂದು ಇದೇ ಸಂದರ್ಭದಲ್ಲಿ ಸಿ.ಎಂ ಸಿದ್ದರಾಮಯ್ಯ ಅವರು ಘೋಷಣೆ ಮಾಡಿದರು.

ಇತರೆ ಭಾಷೆಯಲ್ಲಿ ತಪ್ಪು ತಪ್ಪಾಗಿ ಮಾತ ನಾಡುವು ದಕ್ಕಿಂತ ನಮ್ಮದೇ ಭಾಷೆಯಲ್ಲಿ ಮಾತಾಡಬೇಕು. ಅಕ್ಕ ಪಕ್ಕದ ಎಲ್ಲಾ ರಾಜ್ಯಗಳಲ್ಲೂ ಆಯಾ ರಾಜ್ಯದ ಜನರಾಡುವ ಭಾಷೆಯೇ ಸಾರ್ವಭೌಮ. ನಮ್ಮಲ್ಲೂ ಇದನ್ನೇ ಆಚರಿಸಬೇಕು ಎಂದು ಕರೆ ನೀಡಿದರು.

ಒಂದು ಭಾಷೆ ಮಾತನಾಡುವ ಜನ ಒಂದು ಆಡಳಿತದ ಸೂರಿನಡಿ ಬರಬೇಕು ಎನ್ನುವುದು ಕನ್ನಡ ಏಕೀಕರಣ ಚಳವಳಿಯ ಆಶಯವಾಗಿತ್ತು. ಈ ಆಶಯ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಕನ್ನಡ ಓದುವುದನ್ನು, ಬರೆಯುವುದನ್ನು ಹೆಚ್ಚೆಚ್ಚು ಕಲಿಯಬೇಕು, ಕಲಿಸಬೇಕು ಎಂದು ಕರೆ ನೀಡಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಸಾನ್ನಿಧ್ಯ | ತರಳುಬಾಳು ಹುಣ್ಣಿಮೆ ಮಹೋತ್ಸವ ಫೆ.4 ರಿಂದ 12ರವರೆಗೆ

# ಮೈನವಿರೇಳಿಸುವ ತರಳಬಾಳು ಕುಸ್ತಿ ವೈಭವ

## ಗೆದ್ದವರಿಗೆ ಬೆಳ್ಳಿ ಗದೆ ನಗದು ಬಹುಮಾನ | ಫೆ. 11–12 ರಂದು ಸಾಂಪ್ರದಾಯಿಕ ಕುಸ್ತಿ ಪಂದ್ಯಾವಳಿ

ಕುಸ್ತಿ ಕ್ರೀಡೆ ಎಂದರೆ ಅದ್ಭುತ, ಅಮೋಘ, ಉತ್ತಮ ಮೈಕಟ್ಟಿನ ಪೈಲ್ವಾನರುಗಳ ನಡುವೆ ನಡೆಯುವ ಗೆಲುವಿನ ಹೋರಾಟ. ರಾಜ ಮಹಾರಾಜರ ಆಳ್ವಿಕೆಯಲ್ಲಿ ಕುಸ್ತಿ ಪೈಲ್ವಾನರುಗಳನ್ನು ಅರಮನೆಗಳಲ್ಲಿ ಬೆಣ್ಣೆ, ತುಪ್ಪ ಇತ್ಯಾದಿ ಪೌಷ್ಟಿಕ ಆಹಾರವನ್ನು ನೀಡಿ ಅವರನ್ನು ಸಾಕಿ ಸಲಹುತಿದ್ದರು.

ಗ್ರಾಮಗಳಲ್ಲಿ ಗರಡಿ ಮನೆಗಳು ಇವೆ ಎಂದರೆ ಪರಕೀಯರ ಮತ್ತು ಕಳ್ಳರ ದಾಳಿ ಕಡಿಮೆ ಇರುತ್ತಿತ್ತು ಕಾರಣ ಕಟ್ಟುಮಸ್ತು, ಅಂಗಸೌಷ್ಟ ತೋಳ್ಬಲವುಳ್ಳ ಯುವಕರು ಆ ಊರಿನಲ್ಲಿ ಇದ್ದಾರೆ ಎಂಬ ಅರ್ಥ.ಯುಕ್ತಿ ಶಕ್ತಿಗಳ ಸಮ್ಮೇಳಿತದ್ದೊಂದಿಗೆ ಪರಿಕರಗಳನ್ನು ಉಪಯೋಗಿ ಸದೆ ಕುಸ್ತಿ ಪಟ್ಟುಗಳನ್ನು ಬಳಸಿ ಒಬ್ಬರಿಗೊಬ್ಬರು ಸೆಣಸಿ ಗೆಲ್ಲುವ ಒಂದು ಪಂದ್ಯಾಟದ ಬಗೆಯೇ ಕುಸ್ತಿ.

ಪಾರಂಪರಿಕ ಮೌಲ್ಯವುಳ್ಳ ಹಾಗೂ ಐತಿಹಾಸಿಕ ನೆಲೆಗಟ್ಟಿನ ಗ್ರಾಮೀಣ ಸೊಗಡಿನ ಕ್ರೀಡೆಯನ್ನು ಬೆಳೆಸುವ ಮತ್ತು ಉಳಿಸುವ ನಿಟ್ಟಿನಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮುಂದಾಗಿದ್ದು ಕಳೆದ ಹಲವು ವರ್ಷಗಳಿಂದ ಹಲವು ಬಗೆಯ ಗ್ರಾಮೀಣ ಸೊಗಡಿನ ಕ್ರೀಡಾಕೂಟ ಗಳನ್ನು ನಡೆಸಿಕೊಂಡು ಬರುತ್ತಿದೆ.

ಕಳೆದ ವರ್ಷದಂತೆ ಈ ಬಾರಿಯೂ ಶ್ರೀ ತರಳಬಾಳು ಜಗದ್ಗುರು ಪರಮಪೂಜ್ಯ ಶ್ರೀ 1108 ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನ, ಕ್ರೀಡಾಸಕ್ತಿಯಿಂದ ಚಿತ್ರದುರ್ಗ ಜಿಲ್ಲೆ, ಭರಮಸಾಗರದಲ್ಲಿ ತರಳಬಾಳು ಹುಣ್ಣಿಮೆ ನಿಮಿತ್ತ ಫೆಬ್ರವರಿ 04 ರಿಂದ 12 ರ ವರೆಗೆ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿದ್ದು ಫೆಬ್ರವರಿ 11 ಮತ್ತು 12 ರಂದು "ಬಿಚ್ಚುಗತ್ತಿ ಭರಮಣ್ಣ ನಾಯಕ ಮಹಾ ಮಂಟಪ" ಮುಂಭಾಗದಲ್ಲಿ ಶ್ರೀ ಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕರಿಂದ ಸಿದ್ದಪಡಿಸಿದ ಸಾಂಪ್ರದಾಯಿಕ ನೆಲೆಗಟ್ಟಿನ, ಔಷಧಿ ಗುಣವುಳ್ಳ ಬಲು ಅಪರೂಪವಾಗಿ ನಿರ್ಮಿಸಿದ ಕೆಮ್ಮಣ್ಣಿನ ಕುಸ್ತಿ ಅಖಾಡದಲ್ಲಿ ರಾಜ್ಯ, ರಾಷ್ಟ್ರಮಟ್ಟದ ಮುಕ್ತ ಹಾಗೂ ಆಹ್ವಾನಿತ ಕುಸ್ತಿ ಸ್ಪರ್ಧೆಗಳು ನಡೆಯಲಿವೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

ಫೆಬ್ರವರಿ 11ರಂದು ಪರಮ ಪೂಜ್ಯ ಶ್ರೀಜಗದ್ಗುರುಗಳವರಿಂದ ಉದ್ಘಾಟನೆಗೊಂಡು ಕುಸ್ತಿ ಪಂದ್ಯಾವಳಿ ಆಕರ್ಷಕ ಚಿಣ್ಣರ ಚಿಲಿಪಿಲಿ ಕುಸ್ತಿ ಪ್ರದರ್ಶನ ಕ್ರೀಡಾ ಪ್ರೇಮಿಗಳ ಮನಸ್ಸಿಗೆ ಮುದ ನೀಡಲಿದೆ. ಭಾರತೀಯ ಕುಸ್ತಿ ಶೈಲಿ ಹಾಗೂ ಆಧುನಿಕ ನೆಲೆಗಟ್ಟಿನ ಕುಸ್ತಿ ಪಂದ್ಯಗಳು ನಡೆಯಲಿವೆ.




ಪುರುಷರಿಗಾಗಿ 65 ರಿಂದ 74 ಕೆ.ಜಿ.ದೇಹ ತೂಕದ "ಶ್ರೀ ತರಳಬಾಳು ಕಂಠೀರವ"ಸ್ಪರ್ಧೆ ನಡೆಯಲಿದ್ದು ಪ್ರಥಮ ಸ್ಥಾನ ಪಡೆದ ಕುಸ್ತಿ ಪಟುಗಳಿಗೆ 15,000 ನಗದು ಬಹುಮಾನ, ಬೆಳ್ಳಿ ಗದೆ, ಪ್ರಶಸ್ತಿ ಪತ್ರ ಹಾಗೂ ವಿಜೇತ ನಾಮಫಲಕ,

ದ್ವಿತೀಯ ಸ್ಥಾನ ಪಡೆದವರಿಗೆ 12,500 ರೂಪಾಯಿ ನಗದು, ತೃತೀಯ ಸ್ಥಾನ ಪಡೆದವರಿಗೆ 10,000 ರೂಪಾಯಿ ನಗದು, ನಾಲ್ಕನೇ ಸ್ಥಾನ ಪಡೆದವರಿಗೆ 7,500 ರೂಪಾಯಿ ನಗದು ಬಹುಮಾನದ ಜೊತೆಗೆ ಆಕರ್ಷಕ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

61 ರಿಂದ 65 ಕೆ.ಜಿ.ದೇಹ ತೂಕ ಹೊಂದಿರುವ ಪುರುಷ ಕುಸ್ತಿ ಪಟುಗಳಿಗೆ "ಶ್ರೀ ತರಳಬಾಳು ಕೇಸರಿ"ಸ್ಪರ್ಧೆ ನಡೆಯಲಿದ್ದು ಪ್ರಥಮ ಸ್ಥಾನ ಪಡೆದ ಪಟುವಿಗೆ ಬೆಳ್ಳಿಗದೆ, ಬಿರುದು, ಪ್ರಶಸ್ತಿ ಪತ್ರ ಹಾಗೂ 12,500 ರೂಪಾಯಿ ನಗದು ಬಹುಮಾನ, ದ್ವಿತೀಯ ಸ್ಥಾನ 9,500, ತೃತೀಯ ಸ್ಥಾನ–7,500, ನಾಲ್ಕನೇ 6,000 ರೂಪಾಯಿ ನಗದು ಬಹುಮಾನ, ಆಕರ್ಷಕ ಪಾರಿತೋಷಕ ಹಾಗೂ ಪ್ರಶಸ್ತಿಪತ್ರ ನೀಡಿ ಗೌರವಿಸಲಾಗುವುದು.

ಶ್ರೀ ತರಳಬಾಳು ಕುಮಾರ ಪ್ರಶಸ್ತಿಗೆ ಪೈಪೋಟಿ ನಡೆಸಲಿರುವ ಕುಸ್ತಿ ಪಟುಗಳಿಗೆ 57–61 ಕೆ.ಜಿ.ದೇಹತೂಕ ನಿಗದಿಪಡಿಸಿದ್ದು, ಪ್ರಥಮ ಸ್ಥಾನ ಗಳಿಸಿದ ಕುಸ್ತಿ ಪಟುವಿಗೆ 9,000 ನಗದು, ಬೆಳ್ಳಿ ಗದೆ, ಪ್ರಶಸ್ತಿ ಪತ್ರ ಹಾಗೂ ಬಿರುದು ಪಡೆಯಲಿದ್ದಾರೆ, ದ್ವಿತೀಯ7,000, ತೃತೀಯ– 6,000, ಚತುರ್ಥ 5.000 ಸಾವಿರ ರೂಪಾಯಿ ನಗದು, ಆಕರ್ಷಕ ಪಾರಿತೋಷಕ ಹಾಗೂ ಪ್ರಶಸ್ತಿ ಪತ್ರದೊಂದಿಗೆ ಗೌರವಿಸಲಾಗುತ್ತದೆ.

ಫೆಬ್ರವರಿ 12 ರಂದು ರಾಷ್ಟ್ರಮಟ್ಟದ ನಾನಾ ರಾಜ್ಯಗಳ ಅಂದರೆ ದೆಹಲಿ, ಮಹಾರಾಷ್ಟ್ರ,ಪಂಜಾಬ್, ಹರಿಯಾಣ ಹಾಗೂ ನಮ್ಮ ರಾಜ್ಯದ ಪ್ರಸಿದ್ಧ ಮಹಿಳಾ ಮತ್ತು ಪುರುಷ ಕುಸ್ತಿಪಟುಗಳಿಂದ ನಿಗಧಿಪಡಿಸಿದ ಜೋಡಿ ಕುಸ್ತಿ ಸ್ಪರ್ಧೆಗಳು ನಡೆಯಲಿದ್ದು ವಿಜೇತ ಕುಸ್ತಿಪಟುಗಳಿಗೆ ಪ್ರಶಸ್ತಿ ಪತ್ರದೊಂದಿಗೆ ನಗದು ಬಹುಮಾನ ನೀಡಿ ಗೌರವಿಸಲಾಗುವುದು.



ದಿನಾಂಕ: 10–2–2025 ರ ಸೋಮವಾರ ಕುಸ್ತಿಪಟುಗಳ ದೇಹ ತೂಕವನ್ನು ಪಡೆಯಲಾಗುವುದು,18 ವಯೋಮಿತಿಯ ಕೆಳಗಿನ ಕ್ರೀಡಾಪಟುಗಳು ಪೋಷಕರ ಒಪ್ಪಿಗೆ ಪತ್ರವನ್ನು ತಂದು ಭಾಗವಹಿಸಬಹುದು. ಕ್ರೀಡಾಪಟುಗಳಿಗೆ ಕ್ರೀಡಾ ದಿನಗಳಂದು ಪ್ರಸಾದ(ಊಟ) ಮತ್ತು ವಸತಿ ವ್ಯವಸ್ಥೆ ಇರುತ್ತದೆ.

ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹಾಗೂ ಕ್ರೀಡಾ ಪ್ರೇಮಿಗಳು ತರಳಬಾಳು ಹುಣ್ಣಿಮೆಯ ವಿವಿಧ ಕಾರ್ಯಕ್ರಮಗಳು ಹಾಗೂ ಕ್ರೀಡಾ ಮನೋರಂಜನೆಯನ್ನು ಕಣ್ತುಂಬಿಕೊಳ್ಳಬೇಕೆಂದು ತರಳಬಾಳು ಹುಣ್ಣಿಮೆ ಮಹೋತ್ಸವ–2025 ಭರಮಸಾಗರ ಸ್ವಾಗತ ಸಮಿತಿ, ಸುತ್ತಮುತ್ತಲಿನ ಗ್ರಾಮಸ್ಥರು, ಶ್ರೀಮಠದ ಭಕ್ತರು, ಕಾರ್ಯಕ್ರಮಗಳ ಆಯೋಜಕರು ಮನವಿ ಮಾಡಿದ್ದಾರೆ. ಕುಸ್ತಿ ಕ್ರೀಡೆಯ ಸಂಘಟನೆ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಸಂಚಾಲಕರ ಮೊಬೈಲ್ ಸಂಖ್ಯೆ 8747969381 ಗೆ ಕರೆ ಮಾಡಿ ಸಂಪರ್ಕಿಸಲು ಕೋರಿದೆ.

# ಪರೀಕ್ಷೆ ಅಂದರೆ ಭಯವೇಕೆ?


## ಶಿಕ್ಷಕರಿಂದಲೇ ಪ್ರಶ್ನೆಪತ್ರಿಕೆ ರಚನೆ ಹಾಗೂ ಮೌಲ್ಯಮಾಪನ ಎಂಬುದು ತಿಳಿಯಿರಿ

ಪರೀಕ್ಷೆ ಬಂತು ಅಂದರೆ ನಮ್ಮ ಮಕ್ಕಳ ಹೃದಯದ ಬಡಿತ ಹೆಚ್ಚಾಗುತ್ತದೆ. ಏನೋ ಗಡಿಬಿಡಿ, ಆತಂಕಗಳು ಅವರನ್ನು ಕಾಡುವುದಕ್ಕೆ ಶುರು ಮಾಡುತ್ತವೆ. ಮಕ್ಕಳಿಗಿಂತ ಅವರ ಪೋಷಕರು ಕೈಕಾಲು ಹೊಡೆದುಕೊಂಡು ನನ್ನ ಮಗಳಿಗೆ ಪರೀಕ್ಷೆ ಅಂತ ದಿಗಿಣ ತೆಗೆಯುತ್ತಿರುತ್ತಾರೆ. ಪರೀಕ್ಷೆ ಎನ್ನುವುದು ಶಿಕ್ಷಣ ಮಾದರಿಯ ಮಾನದಂಡಗಳು ಇವೊತ್ತಿನದೇನಲ್ಲ. ಅದು ಕಾಲದ ನೆಲೆಯಲ್ಲಿ ಪಲ್ಲಟವಾಗುತ್ತ ಹೊಸ ಸಾದ್ಯತೆಯ ಅಡಿಯಲ್ಲಿ ಬಿಗು ಹಾಗೂ ಸರಳವಾಗುತ್ತ ಬಂದಿರುವುದು ನಮಗೆ ತಿಳಿದಿರುವ ವಿಚಾರವೇ ಆಗಿದೆ. ಮಗುವು ಶಾಲೆಯನ್ನು ಸೇರಿದ ನಂತರದ ದಿನದಲ್ಲಿ ಒಂದಲ್ಲ ಅದೆಷ್ಟೋ ಪರೀಕ್ಷೆಯನ್ನು ಬರೆದು ಮುಂದಿನ ತರಗತಿಗೆ ವರ್ಗವಾಗಿರುತ್ತದೆ. ಪರೀಕ್ಷೆ ಅಂಬೋದು ತಿಳಿಯದ ಕಲಿಯದ ಯಾವುದೋ ತತ್ವಜ್ಞಾನವನ್ನು ಹುಟ್ಟುಹಾಕುವ ಶೋಧನೆಯಲ್ಲ ಬದಲಿಗೆ ತಾನು ದಿನನಿತ್ಯ ಕಲಿತ ಪಠ್ಯಗಳನ್ನು ತನ್ನ ತಿಳುವಳಿಕೆಯ ಅಭಿವ್ಯಕ್ತಿಯಲ್ಲಿ ಉತ್ತರಿಸುವುದು. ಇಲ್ಲಿ ಪ್ರಶ್ನೆ ಮತ್ತು ಉತ್ತರಗಳೆಂಬ ಮಾದರಿಗಳಿವೆ ಅಷ್ಟೇ. ಇಂತಹ ಪರೀಕ್ಷೆಗಳನ್ನು ವರ್ಷದಲ್ಲಿ ಐದಕ್ಕಿಂತ ಹೆಚ್ಚು, ಹತ್ತಕ್ಕಿಂತ ಕಡಿಮೆ ಬರೆಯುವುದು ಸಾಮಾನ್ಯವಾದರೂ ವಿದ್ಯಾರ್ಥಿಗಳು ಪರೀಕ್ಷೆ ಅಂದರೆ ಭಯ ಪಡುವುದು ನಿಂತಿಲ್ಲ. ಪಬ್ಲಿಕ್ ಪರೀಕ್ಷೆ ಅಂದ ಕೂಡಲೇ ಆತಂಕ ಗೊಳ್ಳುವ, ಮಾನಸಿಕವಾಗಿ ಕುಗ್ಗಿ ಹೋಗುವ, ಒತ್ತಡದಲ್ಲಿ ಓದುವುದಕ್ಕೆ ಆಗದೆ ಪರಿತಪಿ ಸುವುದನ್ನು ನೋಡುತ್ತೇವೆ. ಈ ರೀತಿಯ ಪರಿಸರವು ಪಲ್ಲಟವಾಗಿ ಪರೀಕ್ಷೆ ಅಂದರೆ ಹಬ್ಬ ಅನ್ನುವ ಮನೋಭಾವ ರೂಪುಗೊಳ್ಳಬೇಕು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

ನಮ್ಮ ಮನಸಿನಲ್ಲಿ ನೆಲೆ ನಿಂತಿರುವ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ವಾದ ಪರೀಕ್ಷೆಯ ಕುರಿತಾದ ವಿವೇಚನೆಗಳು ಏಕರೂಪದ ಅಭಿವ್ಯಕ್ತಿಯನ್ನು ಹೊಂದದೆ ಅದು ಬಹುಸ್ತರದ ವಿವರಣೆ ಯನ್ನು ಹುಟ್ಟು ಹಾಕಿದೆ. ಶೈಕ್ಷಣಿಕ ವ್ಯವಸ್ಥೆಗೆ ಸಂಬಂಧಿಸಿದ ಇಲಾಖೆಯು ವಿದ್ಯಾರ್ಥಿಗಳ ಗುಣ ಮಟ್ಟತೆ ಯನ್ನು ಪಡೆಯಬೇಕು ಪಾಸು ಆಗಬೇಕು, ಪರೀಕ್ಷೆಯಿಂದ ಅವರ ಬದುಕಿಗೆ ಪ್ರಯೋಜ ನವು ಆಗಬೇಕೆಂದು ಎಂಬ ಗ್ರಹಿಕೆಯನ್ನು ಮುಂದಿಟ್ಟು ಕೊಂಡು ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳ ಮಾದರಿಯ ಬದಲಾವಣೆ; ಸ್ಪರ್ಧಾತ್ಮಕ ಪರೀಕ್ಷೆಯ ಮಾದರಿಯನ್ನು ಅನುಸರಿಸಿ ಪ್ರಶ್ನೆಗಳ ನೀಡಿಕೆ, ಗುಣಮಟ್ಟದ ನೆಲೆಯಿಂದ ಅನುಭವಿ ಉಪನ್ಯಾಸಕರಿಂದ ಸೂಕ್ತವಾದ ಪ್ರಶ್ನೆಪತ್ರಿಕೆಯ ರಚನೆ ಮತ್ತು ಕಠಿಣ ಮಾದರಿಯ ಪರೀಕ್ಷೆಯ ನಿರ್ವಹಣೆ ಎಂಬ ವಿಚಾರಗಳು ಮಕ್ಕಳಿಗೆ ಶಾಲಾ–ಕಾಲೇಜಿನಲ್ಲಿ ತಿಳಿಸಲಾಗುತ್ತದೆ.



ಪರೀಕ್ಷೆಯಲ್ಲಿ ಅಂಕ ಪಡೆಯುವುದೇ ಮಗುವಿನ ಮುಖ್ಯ ಗುರಿ ಅದು ನಮ್ಮ ಬದುಕಿನ ಪ್ರತಿಷ್ಠೆಯು ಆಗಿದೆ. ನನ್ನ ಮಗಳು ರಾಜ್ಯಕ್ಕೆ ಮೊದಲ ಸ್ಥಾನ ಪಡೆಯಬೇಕು, ನಮ್ಮ ಕುಟುಂಬದಲ್ಲಿ ಈ ಹಿಂದೆ 98% ಅಂಕ ಪಡೆದಿದ್ದಾರೆ ನೀನು 99% ಅಂಕ ಪಡೆಯಬೇಕು. ಒಂದು ವೇಳೆ ಕಡಿಮೆ ಅಂಕ ಬಂದರೆ ನಾನು ಊರಿನಲ್ಲಿ ಮುಖ ತೋರಿಸಿ ಬದುಕುವುದಕ್ಕೆ ಸಾಧ್ಯವೇ ಎಂಬೆಲ್ಲ ಮಾತುಗಳನ್ನು ಮಕ್ಕಳಿಗೆ ಹೇಳುವುದರ ಜೊತೆಯಲ್ಲಿ ಊರಿನ ತುಂಬೆಲ್ಲ “ನನ್ನ ಮಗಳು ಈ ಸಾರಿ 99% ತೆಗಿತಾಳೆ ಕಂಡ್ರಿ” ಅಂತ ಹೇಳಿಕೊಂಡು ಬಂದಿರುವ ತಾಯಿ–ತಂದೆಯ ಮುಂದೆ ಮಕ್ಕಳು ಸಂಕಟ ಪಡುತ್ತಾರೆ. ತಾನು ಕಲಿತು ಅಷ್ಟು ಅಂಕ ಬರದೇ ಹೋದರೆ ಏನು ಮಾಡುವುದು. ಅನ್ನೋ ಚಿಂತೆಯಲ್ಲಿಯೇ ಮಕ್ಕಳು ಓದಿದ್ದನ್ನು ಗ್ರಹಿಸಿಕೊಳ್ಳುವ ಶಕ್ತಿಯನ್ನು ಕಳೆದುಕೊಂಡು ಮಾನಸಿಕವಾಗಿ ಚಿಂತೆಗೆ ಒಳಗಾಗುತ್ತಾರೆ.

ಮಕ್ಕಳ ಓಟಿನಿಂದಲೇ ಗೆದ್ದು ಮಂತ್ರಿಯಾಗಿದ್ದೇವೆ ಎನ್ನುವ ಭ್ರಮೆಯನ್ನು ಹೊಂದಿರುವ ರಾಜಕೀಯ ವ್ಯಕ್ತಿಗಳು ಮಕ್ಕಳು ಪ್ರತಿಯೊಬ್ಬರು ಪಾಸ್ ಆಗಬೇಕು ಅವರು ಫೇಲ್ ಆದರೆ ಮಾನಸಿಕ ವಾಗಿ ಕುಗ್ಗುತ್ತಾರೆ. ಮಕ್ಕಳ ಮನಸ್ಸು ಹಸಿ ಮಣ್ಣಿನ ಹಾಗೆ ಅವರು ಪಾಸು ಆಗೋದೆ ಅವರ ಭವಿಶ್ಯವೆಂದು ನಂಬಿ ಮಾತನಾಡುವ ಮೂರು ನಾಲ್ಕು ಪರೀಕ್ಷೆಗಳನ್ನು ರೂಪಿಸುವ, ಸರಳವಾದ ಪರೀಕ್ಷೆ ಎಲ್ಲರೂ ಪಾಸು ಅನ್ನೋ ಘೋಷಣೆಯನ್ನು ನೀಡುವ ರಾಜಕೀಯ ಜೀವಿಗಳು ಮಕ್ಕಳ ಗುಣಮಟ್ಟವನ್ನು ಶಿಕ್ಷಣದ ಮೀಮಾಂಸೆಯನ್ನು ಗಾಳಿಗೆ ತೂರಿ ಮಾತನಾಡುತ್ತಾರೆ. ಇವರ ಮಾತುಗಳನ್ನು ಗಟ್ಟಿಯಾಗಿ ಹಚ್ಚಿಕೊಳ್ಳುವ ಪೋಷಕರು ಮತ್ತು ಮಕ್ಕಳು ಶೈಕ್ಷಣಿಕ ಮನೋಭಾವ ವನ್ನೇ ಕಳೆದುಕೊಂಡಿದ್ದಾರೆ. ಅಸಲಿ ಸತ್ಯವೆಂದರೆ ಇಲ್ಲಿ ಶಿಕ್ಷಕರೇ ಪ್ರಶ್ನೆ ಪತ್ರಿಕೆಯನ್ನು ಮಾಡುವ ಮತ್ತು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವವರಾಗಿರುತ್ತಾರೆ. ಈ ಬಗ್ಗೆಯ ತಿಳುವಳಿಕೆಯು ಬಲವಾಗಿ ನಮ್ಮೊಳಗೆ ನಿಲ್ಲದೇ ಇರುವುದು ದುರಂತವಾಗಿದೆ.

ಪರೀಕ್ಷೆ ಎಂದರೆ ಹಬ್ಬ ಅನ್ನೊ ಮನೋಭಾವ ಮಕ್ಕಳಲ್ಲಿ ವೃದ್ಧಿಯಾಗುವಂತೆ ಮಾಡುವುದಕ್ಕೆ ಮೊದಲು ನಮ್ಮ ವ್ಯವಸ್ಥೆಯಲ್ಲಿ ಪರೀಕ್ಷೆಯ ಬಗೆಗೆ ಇರುವಂತ ಧೋರಣೆಗಳನ್ನು ತಿದ್ದಬೇಕು. ಮಕ್ಕಳು ಮುಂದಿನ ದೇಶದ ಆಸ್ತಿ ಅನ್ನುವ ಪ್ರಜ್ಞೆಯು ನಮ್ಮಲ್ಲಿ ಇದ್ದಾರೆ ನಾವು ತಿದ್ದುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ನಮ್ಮ ಪರಿಸರಲ್ಲಿ ಕೆಲವು ಶಾಲೆಗಳಲ್ಲಿ ಫಲಿತಾಂಶ ಉತ್ತಮವಾಗಿ ಬರಬೇಕು ಅನ್ನೋ ಕಾರಣದಿಂದ ಮಕ್ಕಳಿಗೆ ಪರೀಕ್ಷೆಯ ಹಿಂದಿನ ದಿನವೇ ಪ್ರಶ್ನೆಗಳನ್ನು ನೀಡಿ ಅದನ್ನೇ ಬರೆಸಲಾಗುತ್ತದೆ; ಅದೆಷ್ಟೋ ಶಾಲೆಗಳಲ್ಲಿ ಪರೀಕ್ಷೆ ಬರೆಯುವ ವೇಳೆ ಉತ್ತರಗಳನ್ನು ಬೋರ್ಡಿನಲ್ಲಿ ಬರೆದು ಬರೆಸಲಾಗುತ್ತದೆ; ಪುಸ್ತಕವನ್ನು, ಉತ್ತರದ ಹಾಳೆಗಳನ್ನು, ಗೈಡುಗಳನ್ನು ನೀಡಿ ಪರೀಕ್ಷೆಯನ್ನು ಬರೆಸುವುದು ಇದೆ; ಇದೆಲ್ಲದರ ಮಧ್ಯೆ ಅತ್ಯಂತ ಕಠಿಣವಾಗಿ ಶಿಸ್ತುಬದ್ಧವಾಗಿ ಪರೀಕ್ಷೆಯನ್ನು ನಡೆಸುವ ಶಾಲೆಗಳು ಇವೆ. ಶಿಕ್ಷಕರು ನನ್ನ ವಿದ್ಯಾರ್ಥಿಗಳು ಪಾಸು ಆಗಬೇಕು ಉತ್ತಮ ಅಂಕ ಗಳಿಸಬೇಕು ಅನ್ನೋ ಕಕ್ಕಲಾತಿಯಿಂದ ಪಠ್ಯವನ್ನು ಹೇಳಿಕೊಟ್ಟು ಓದಿಸಿ ಬರೆಸಿ ಪರೀಕ್ಷೆಗೆ ಸಿದ್ಧತೆ ಮಾಡುವವರ ನಡುವಿನಲ್ಲಿ ಕೆಲವು ಶಿಕ್ಷಕರು ಶಾಲೆಗೆ ಹೋಗದೇ ಪಠ್ಯ ಸರಿಯಾಗಿ ಮಾಡದೆ ರಾಜಕೀಯ ಮಾಡಕೊಂಡು ಕೊನೆಗೆ ಗೈಡೋ, ಪುಸ್ತಕವೋ ಕೊಟ್ಟು ಪರೀಕ್ಷೆ ಬರೆಸುವ ಸೂಕ್ತವಾಗಿ ಮೌಲ್ಯಮಾಪನ ಮಾಡದೆ ಇರುವುದು ಸಹ ಗಮನಿಸಬೇಕಾಗುತ್ತೆ.

ಮಕ್ಕಳು ಶಾಲೆಯ ಪರಿಸರದಲ್ಲಿ ಕೇಳಿದ್ದು, ಕಲಿತದನ್ನು ಪರೀಕ್ಷೆಗೆ ತಯಾರಿ ಮಾಡಬೇಕೆ.? ಮನೆಯಲ್ಲಿ ಪೋಷಕರು ಸೂಚಿಸುವ ನೆಲೆಯನ್ನು ಅನುಸರಿಸಬೇಕೆ,? ರಾಜಕೀಯ ವ್ಯವಸ್ಥೆಯು ಹೇಳುವು ದನ್ನು ಗ್ರಹಿಸಿಕೊಳ್ಳಬೇಕೆ? ಎನ್ನುವ ಗೊಂದಲಗಳು ಮಕ್ಕಳ ಎದೆಯಲ್ಲಿ ಭಯವನ್ನು ಹುಟ್ಟು ಹಾಕುವ ಮೊದಲ ಮೆಟ್ಟಿಲಾಗಿದೆ. ಈ ನಡುವೆ ಸಮಾಜ ಕೆಲವು ಅನಿಷ್ಟಗಳು ಪ್ರಶ್ನೆಪತ್ರಿಕೆಯನ್ನೇ ಕದ್ದು ಪರೀಕ್ಷೆಯ ಹಿಂದಿನ ದಿನ ಹಣಕ್ಕೆ ಮಕ್ಕಳಿಗೆ ಕೊಡುವ ಕಾರ್ಯವನ್ನು ಮಾಡುತ್ತವೆ ಇದರಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ಬೇಕಾದ ತಯಾರಿಯನ್ನು ಮಾಡದೆ ದಿಕ್ಕುದೆಸೆಯಿಂದ ಉತ್ತರವನ್ನು ಕಲಿತುಕೊಂಡು ಹೋಗಿ ಕೊನೆಗೆ ಏನು ಬರೆಯದೇ ವಿಚಲಿತರಾಗುವುದು ನಮ್ಮ ಸಾಮಾನ್ಯ ಅಭಿವ್ಯಕ್ತಿಯಾಗಿದೆ. ಇದಕ್ಕಿಂತ ಹೆಚ್ಚಾಗಿ ಬಹುತೇಕ ಮಕ್ಕಳು ಶ್ರಮಪಟ್ಟು ಆಸಕ್ತಿಯಿಂದ ಕಲಿಯುವುದನ್ನೇ ಬಿಟ್ಟಿದ್ದಾರೆ. ಹೇಗಾದರೂ ಪಾಸು ಆಗುತ್ತೇವೆ, ಪಾಸು ಮಾಡುತ್ತಾರೆ ಅನ್ನೋ ಭಾವನೆಯೇ ಮಕ್ಕಳ ಮೌಲ್ಯವನ್ನು ಕೆಡಿಸಿದೆ. ಪರೀಕ್ಷೆ ಅನ್ನೋದು ಪವಿತ್ರವಾದದ್ದು ಅದಕ್ಕೆ ಅರ್ಥವಂತಿಕೆ ಉಂಟು. ಅದರ ಮೌಲ್ಯವನ್ನು ಏಕರೂಪದಲ್ಲಿ ಮಕ್ಕಳ ಮನಸ್ಸಿಗೆ ಹೇಳಬೇಕು. ಭ್ರಷ್ಟ ಪರಿಸರವನ್ನು ದೂರವಾಗಿ ಮುಕ್ತವಾದ ತಿಳುವಳಿಕೆ ನೆಲೆಯನ್ನು ಮಕ್ಕಳಲ್ಲಿ ಬೆಳೆಸುವುದರಿಂದ ಪರೀಕ್ಷೆ ಮಕ್ಕಳ ಬದುಕಿಗೆ ದಾರಿದೀಪ ಆಗಬಲ್ಲದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು



**ಭಾರತೀಯ ಸಂವಿಧಾನ" ಓದು...!!**
**ಭಾರತೀಯ ಪ್ರಜೆಗಳಾದ ನಾವು...!!**

ಓದು...ಓದು...ಓದು
ಭರವಸೆ'ಯ
ಬದುಕು ಕಟ್ಟಿಕೊಳ್ಳಲು
ಬಡವರ ಬದುಕು
ಬದಲಾಯಿಸುವ
ಜ್ಞಾನದ ಸಂಕೇತವಾದ
ಅಂಬೇಡ್ಕರ್ ಬರೆದ
ಭಾರತೀಯ ಸಂವಿಧಾನ ಓದು...!!

ಓದು... ಓದು... ಓದು....
ಬಡವರ....
ಆಲೋಚನೆಯ ದಿಕ್ಕು ಬದಲಿಸಿ
ಹೋರಾಟದೊಂದಿಗೆ
ಸಮತೆಯ ಕಾನೂನು ರೂಪಿಸಿ
ಶ್ರೇಷ್ಠ ನಾಗರೀಕನಾಗಿ
ಬದುಕು ರೂಪಿಸಿಕೊಳ್ಳಲು
ಭವಿಷ್ಯಕೆ ಮುನ್ನುಡಿಯಾದ
ಅಂಬೇಡ್ಕರ್ ಬರೆದ
ಭಾರತೀಯ ಸಂವಿಧಾನ ಓದು...!!

ಓದು... ಓದು... ಓದು....
ವಿಶ್ವಜ್ಞಾನಿ
ವಿಶ್ವಕೋಶವಾಗಿ
ದೇಶ ವಿದೇಶ ಸುತ್ತಿ
ಅಪಾರ ಪಾಂಡಿತ್ಯ ಗಳಿಸಿ
ಸಂಗ್ರಹಿಸಿದ ಪುಸ್ತಕಗಳ ಸಾಲು
ಬರಿದಾದ ಬಡವರ ಬದುಕಿಗೆ
ಬರವಣಿಗೆಯಾಗಿ
ನೊಂದವರ ನೋವಿಗೆ ನೆರಳಾಗಿ
ಬಡವರ ಬದುಕಿಗೆ ಸ್ಫೂರ್ತಿಯಾಗಿ
ಜಗತ್ತಿಗೆ ಮಾದರಿಯಾದ
ಅಂಬೇಡ್ಕರ್ ಬರೆದ
ಭಾರತೀಯ ಸಂವಿಧಾನ ಓದು...!!

ಭಾರತೀಯ ಸಂವಿಧಾನದಡಿ
ಪ್ರತಿ ಪ್ರಜೆಗೂ
ಸಾಮಾಜಿಕ, ಆರ್ಥಿಕ
ರಾಜಕೀಯ ನ್ಯಾಯ
ಕಲ್ಪಿಸುವ ವೇದಿಕೆಯಾಗಿ...!!

ಪ್ರತಿ ಪ್ರಜೆಗೂ
ವ್ಯಕ್ತಿ ಗೌರವ
ಸಮಾನ ಅವಕಾಶ
ಸಮಾನತೆ ದೊರಕಿಸುವ
ಸಾಧನವಾಗಿ...!!
ಪ್ರತಿ ಪ್ರಜೆಯಲಿ
ರಾಷ್ಟ್ರೀಯ ಭಾವೈಕ್ಯತೆಯ
ಸಾರ ಭಿತ್ತಿ...!!
ಏಕತೆ, ಭ್ರಾತೃತ್ವದ ಸಂಕಲ್ಪವ ಮೂಡಿಸಿ...!!

ಭಾರತೀಯ
ಪ್ರಜಾಸತತ್ಮಾಕ
ಒಕ್ಕೂಟದ ವ್ಯವಸ್ಥೆಗೆ
ಬುನಾದಿಯಾಗಿರುವ....!!

ಭವ್ಯ ಭಾರತದ
ಮಹಾಗ್ರಂಥವಾಗಿರುವ...!!
ಪ್ರಜಾಗಣರಾಜ್ಯೋತ್ಸವ ಉದಯಕೆ...
ಕಾರಣವಾಗಿರುವ...!!

ಸಂವಿಧಾನದ ಮೌಲ್ಯ ಎತ್ತಿ ಹಿಡಿಯಲು...!!
ಸಂವಿಧಾನ ಶಿಲ್ಪಿ " ಬಾಬ ಸಾಹೇಬ
ಅಂಬೇಡ್ಕರ್ ಬರೆದ ಸಂವಿಧಾನದಡಿ

ಭಾರತದ ಪ್ರಜೆಗಳಾದ ನಾವು
26.01.2025 ರಂದು....
ಭಾರತೀಯ ಸಂವಿಧಾನ" ಓದು...!!
ಗಣರಾಜ್ಯೋತ್ಸವದ ಶುಭಾಶಯಗಳು....!!

**– ಪ್ರಸನ್ ಮಧುಗಿರಿ. DPM NRLM**
**ಯೋಜನೆ, ವಿಜಯನಗರ ಜಿಲ್ಲೆ**

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE! hampitimes epaper
SCAN QR CODE TO JOIN FOLLOW HAMPI TIMES whatsapp channel

ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ । ಬಜೆಟ್‌ನಲ್ಲಿ ವಿಜಯನಗರಕ್ಕೆ ವೈದ್ಯಕೀಯ ಕಾಲೇಜ್ ಭರವಸೆ

# ಸಂವಿಧಾನದಿಂದ ಸಮಾನತೆ ಸಾಧ್ಯ

**ತುಂಡಾದ 405 ಅಡಿ ರೋಪ್ । ಕಳಚಿ ಕೆಳಗೆ ಬಿದ್ದ ತ್ರಿವರ್ಣಧ್ವಜ । ನಿರ್ವಹಣೆ ಮರೆತ ಆಡಳಿತ ದೇಶಭಕ್ತರು, ದೇಶಪ್ರೇಮಿಗಳಿಂದ ಅಸಮಾಧಾನ । ಶಾಸಕ ಎಚ್.ಆರ್.ಗವಿಯಪ್ಪ ಗೈರು**








**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಹೊಸ ಜಿಲ್ಲೆಯಾಗಿದ್ದರಿಂದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಬೇಕೆಂದು ಸಿಎಂ ಸಿದ್ದರಾಮಯ್ಯನವರ ಬಳಿ ಕೇಳಿದ್ದೇನೆ. ಈ ಬಾರಿಯ ಬಜೆಟ್‌ನಲ್ಲಿ ವಿಜಯನಗರ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಘೋಷಣೆಯಾಗುವಂತೆ ಕ್ರಮವಹಿಸುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.
ಜಿಲ್ಲಾಡಳಿತದಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 26 ರಂದು ನಡೆದ 76ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ವಿಜಯನಗರ ಜಿಲ್ಲೆಗೆ ಗಣಿಗಾರಿಕೆ ಡಿಎಂಎಫ್ ಅನುದಾನ ಶೇ.28ರಷ್ಟು ಮಾತ್ರ ಇದೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಅಗತ್ಯವಿದೆ. ಈ ಭಾಗದ ಬಹುದಿನಗಳ ರೈತರ ಬೇಡಿಕೆಯಾದ ಸಕ್ಕರೆ ಕಾರ್ಖಾನೆಗೆ ಶಾಸಕ ಗವಿಯಪ್ಪನವರು ಸ್ಥಳ ನೋಡಿದ್ದಾರೆ. ಪರಿಶೀಲಿಸಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೂ ಕ್ರಮವಹಿಸಲಾಗುವುದು. ಕಾಂಗ್ರೆಸ್ ಸರ್ಕಾರ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದಾರೆ. ವಿಜಯನಗರ ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿಗೆ ಅಗತ್ಯ ಅನುದಾನವನ್ನೂ ನೀಡಲಾಗುತ್ತಿದೆ ಎಂದರು.
ದೇಶದಲ್ಲಿ ಸಂವಿಧಾನ ರಚನೆಯಿಂದಾಗಿ ಸಮಾನತೆ ನಿರ್ಮಾಣ ಸಾಧ್ಯವಾಗಿದೆ. ನಾವೆಲ್ಲ ಸಂವಿಧಾನದ ಆಶಯ ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನದ ಮೂಲಕ ಡಾ; ಬಿ.ಆರ್.ಅಂಬೇಡ್ಕರ್‌ರವರ ಕನಸು ನನಸು ಮಾಡಬೇಕಾಗಿದೆ. ಸಂವಿಧಾನದ ಮೂಲ ಆಶಯ ಸಾಮಾಜಿಕ ನ್ಯಾಯವಾಗಿದೆ. ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ನಮ್ಮ ದೇಶ ಪ್ರಜಾತಂತ್ರ ಗಣತಂತ್ರ ಪ್ರಯೋಗವನ್ನು ಯಶ್ವಸಿಯಾಗಿ ನಡೆಸಿಕೊಂಡು ಬಂದಿದೆ. ಇದಕ್ಕಾಗಿ ಭಾರತದ ಸಂವಿಧಾನ ಶಿಲ್ಪಿ ಮಹಾನ್ ಮಾನವತವಾದಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸಲೇಬೇಕು ಎಂದರು.
ದೇಶದ ಇತಿಹಾಸದಲ್ಲೇ ಜನವರಿ 26 ಅತ್ಯಂತ ಮಹತ್ವದ ದಿನವಾಗಿದ್ದು, ದೇಶಕ್ಕೆ ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡ ಈ ಸಂಭ್ರಮದ ಐತಿಹಾಸಿಕ ದಿನದಂದು ಗಣತಂತ್ರ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದರ ಮೂಲಕ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲಾಗಿದೆ. ರಾಜ್ಯ ಸರ್ಕಾರದಿಂದ ಬಡವರಿಗೆ, ಮಹಿಳೆಯರಿಗೆ, ಯುವಕರ ಹಿತದೃಷ್ಟಿಯಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲಾಗಿದೆ. ಈಗಾಗಲೇ ಯಶಸ್ವಿಯಾಗಿ ಯೋಜನೆಗಳು ಅನುಷ್ಠಾನವಾಗುತ್ತಿದ್ದು ರಾಜ್ಯ ಸರ್ಕಾರ ಅಭಿವೃದ್ಧಿಗೆ ಆದ್ಯತೆ ನೀಡಿ ಎಲ್ಲಾ ಜಿಲ್ಲೆಗಳಿಗೆ ಹೆಚ್ಚಿನ ಅನುದಾನಗಳನ್ನು ನೀಡಲಾಗಿದೆ ಎಂದರು.
ಕಾರ್ಯಕ್ರಮದಲ್ಲಿ ಹುಡಾ ಅಧ್ಯಕ್ಷ ಎಚ್.ಎನ್.ಎಫ್. ಇಮಾಮ್ ನಿಯಾಜಿ, ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ವಿವೇಕಾನಂದ, ತಹಸೀಲ್ದಾರ ಎಂ.ಶೃತಿ ಇನ್ನಿತರರು ಉಪಸ್ಥಿತರಿದ್ದರು. ಶಾಸಕ ಎಚ್.ಆರ್.ಗವಿಯಪ್ಪ ಗೈರಾಗಿದ್ದರು. ಪೊಲೀಸ್ ಇಲಾಖೆ, ಗೃಹಕ ರಕ್ಷಕದಳ, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ, ಪೌರಕಾರ್ಮಿಕರ ತುಕಡಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ತಹಶೀಲ್ದಾರ್ ಕಚೇರಿಯ ಭೂಮಿ ಕೇಂದ್ರದ ಅತ್ಯುನ್ನತ ಸೇವೆ ಗುರುತಿಸಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು. ಬಳಿಕ ನಗರದ ವಿವಿಧ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ಜರುಗಿದವು.
**405 ಅಡಿ ಏರದೇ ಕಳಚಿ ನೆಲಕ್ಕುರುಳಿದ ರಾಷ್ಟ್ರಧ್ವಜ:** ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ವಿವಿಧ ತುಕಡಿಗಳಿಂದ ಧ್ವಜವಂದನೆ ಸ್ವೀಕರಿಸುವ ಸಂದರ್ಭದಲ್ಲೇ ದೇಶದ ಅತ್ಯುನ್ನತ 405 ಅಡಿ ಎತ್ತರದ ಧ್ವಜಸ್ತಂಭದ ತುದಿ ಏರಬೇಕಿದ್ದ ಧ್ವಜ ತಂತಿ ತುಂಡಾಗಿ ನೆಲಕ್ಕೆ ಕಳಚಿಬಿದ್ದಿತು. ಧ್ವಜಸ್ತಂಭದ ಸುತ್ತಮುತ್ತ ಜನರು ಇಲ್ಲದ್ದರಿಂದ ಪ್ರಾಣಾಪಯಾದಿಂದ ಪಾರಾದರು. ದೇಶ ಪ್ರೇಮಿಗಳು ಇಂತಹ ಅವಘಡ ನಡೆಯಬಾರದಿತ್ತು. ಸಂಬಂಧಿಸಿದವರ ನಿರ್ವಹಣೆ ನಿರ್ಲಕ್ಷ್ಯವೇ ಇದಕ್ಕೆ ಮುಖ್ಯ ಕಾರಣ ವೆಂದು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು ಪ್ರತಿಕ್ರಿಯಿಸಿ ಘಟನೆ ಕುರಿತು ತನಿಖೆ ನಡೆಸಿ ಸಂಬಂಧಿಸಿದವರ ವಿರುದ್ಧ ಕ್ರಮಜರುಗಿಸಲಾಗುವುದು ಎಂದರು.



## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 27–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1618.46 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11136 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 57.083 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.6 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 264 ಕ್ಯುಸೆಕ್ |
| ಸಾಮರ್ಥ್ಯ | 9.903 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

**28–01–2025 – ಮಂಗಳವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ವಜ್ರ |
| ಕರಣ | : ವಿಷ್ಟಿ(ಭದ್ರ) |
| ಸೂರ್ಯೋದಯ | : 07:09:31 |
| ಸೂರ್ಯಾಸ್ತ | : 18:10:32 |
| ರಾಹು ಕಾಲ | : 15:25–16:48 |
| ಯಮಘಂಡ ಕಾಲ | : 09:55–11:17 |
| ಗುಳಿಕ ಕಾಲ | : 12:40–14:03 |

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ವಿವಿಧೆಡೆ 76ನೇ ಗಣರಾಜ್ಯೋತ್ಸವ



ಹೊಸಪೇಟೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನವರಿ 26 ರಂದು ಗಣರಾಜ್ಯೋತ್ಸವ ಆಚರಿಸಲಾಯಿತು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಗಣರಾಜ್ಯೋತ್ಸವದ ಧ್ವಜಾ ರೋಹಣ ನೆರವೇರಿಸಿದರು. ಈ ವೇಳೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಗಣರಾಜ್ಯೋತ್ಸವ ನಿಮಿತ್ತ ಜಿಲ್ಲಾಧಿಕಾರಿಗಳು ಹೊಸಪೇಟೆಯ ಜೋಳದರಾಶಿಯ ಗುಡ್ಡದ ಮೇಲೆ ಇಲಾಖೆಯ ಅಧಿಕಾರಿಗಳೊಂದಿಗೆ ಧ್ವಜಾರೋಹಣ ನೆರವೇರಿಸಿದರು. ಅದೇ ರೀತಿ ಜಿಲ್ಲಾಧಿಕಾರಿಗಳ ಗೃಹ ಕಚೇರಿಯಲ್ಲಿ ಸಹ ಗಣರಾಜ್ಯೋತ್ಸವ ಆಚರಿಸಲಾಯಿತು



ಹೊಸಪೇಟೆಯ ತಾಲೂಕು ಆಡಳಿತದಿಂದ ತಹಶೀಲ್ದಾರ ಕಚೇರಿಯಲ್ಲಿ ಜನವರಿ 26 ರಂದು ಗಣರಾಜ್ಯೋತ್ಸವ ಆಚರಿಸಲಾಯಿತು. ತಹಶೀಲ್ದಾರರಾದ ಎಂ.ಶೃತಿಯವರು ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 52 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು
https://epaper.hampitimes.com

ನಿನ್ನ ಏಳಿಗೆ ನೀನೆ ಶಿಲ್ಪಿ ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ಕನ್ನಡ (ಪ್ರ.ಭಾ) ಪತ್ರಲೇಖನ

ನಮ್ಮೊಡನೆ ಇರುವವರೊಂದಿಗೆ ಅಥವಾ ಹತ್ತಿರದಲ್ಲಿ ಇರುವವರೊಡನೆ ಮಾತುಗಳ– ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದಲ್ಲಿ, ಪರಸ್ಥಳದಲ್ಲಿ, ಅನ್ಯ ದೇಶಗಳಲ್ಲಿ ಇರುವವರ ಜೊತೆ ಇದು ಅಸಾಧ್ಯ. ಇದಕ್ಕಾಗಿಯೇ ಲಿಪಿ ಇರುವ ಭಾಷೆಗಳಲ್ಲಿ ಪತ್ರಲೇಖನ ಆರಂಭವಾಯಿತು. ಈ ಮೂಲಕ ಪರ ಸ್ಥಳದಲ್ಲಿ ಇರುವವರೊಡನೆ ಸಂಪರ್ಕ ಸಾಧ್ಯವಾಯಿತು. ಪತ್ರಲೇಖನದ ಇತಿಹಾಸ ಅತಿ ಪ್ರಾಚೀನವಾದದು. ಮಹಾಕವಿ ಕಾಳಿದಾಸನ ಶಾಕುಂತಲ ನಾಟಕದಲ್ಲಿ ಶಾಕುಂತಲೆಯು ತಾವರೆಯ ಎಲೆಗಳ ಮೇಲೆ ಪತ್ರವನ್ನು ಬರೆದು, ತನ್ನ ಮನದ ಅಳಲನ್ನು ದುಶ್ಯಂತನಿಗೆ ತಿಳಿಸುವ ಪ್ರಯತ್ನ ಮಾಡಿದ್ದಾಳೆ. ಹಿಂದಿ ಅರಸರು, ಅಧಿಕಾರಿಗಳು ಪತ್ರಗಳನ್ನು ಕುದುರೆ ಸವಾರರ ಮೂಲಕ ಅಥವಾ ತರಬೇತಿ ಪಡೆದ ಪಾರಿವಾಳಗಳ ಮೂಲಕ ಕಳಿಸುವ ಪಡೆಯುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು.19ನೇ ಶತಮಾನದಲ್ಲಿ ಅಂಚೆ ಇಲಾಖೆ ಪ್ರಾರಂಭವಾದ ಮೇಲೆ ಜನಸಾಮಾನ್ಯರಿಗೂ ಅಲ್ಪ ವೆಚ್ಚದಲ್ಲಿ ಪತ್ರ ವ್ಯವಹಾರ ನಡೆಸಲು ಸಾಧ್ಯವಾಯಿತು.
ಪತ್ರಗಳು ಬರಹ ರೂಪದಲ್ಲಿರುವುದರಿಂದ ಓದಿ ಅರ್ಥ ಮಾಡಿಕೊಳ್ಳುವುದು ಸಾಧ್ಯ. ಪತ್ರವನ್ನು ಹಲವು ಕಾಲ ಸಂರಕ್ಷಿಸಿ ಇಟ್ಟುಕೊಳ್ಳಬಹುದು. ಆತ್ಮೀಯರ, ಹಿರಿಯರ, ಪ್ರಸಿದ್ಧ ವ್ಯಕ್ತಿಗಳ ಪತ್ರಗಳನ್ನು ಓದುವಾಗ ಸಿಗುವ ಆನಂದ, ಪ್ರೋತ್ಸಾಹ, ಉಲ್ಲಾಸ ಅವಿಸ್ಮರಣೆಯವಾದುದು.
**ಪತ್ರಗಳಲ್ಲಿ ವೈಯಕ್ತಿಕ ಪತ್ರಗಳು( ಕೌಟುಂಬಿಕ ಪತ್ರಗಳು/ ಖಾಸಗಿ ಪತ್ರಗಳು) ಮತ್ತು ವ್ಯವಹಾರಿಕ ಪತ್ರಗಳು( ಅನೌಪಚಾರಿಕ ಪತ್ರಗಳು) ಎಂಬ ಎರಡು ವಿಧಗಳನ್ನು ಕಾಣಬಹುದಾಗಿದೆ.**
**1. ವೈಯಕ್ತಿಕ ಪತ್ರಗಳು–** ತಂದೆ, ತಾಯಿ, ಅಣ್ಣ, ತಮ್ಮ, ತಂಗಿ ಮೊದಲಾದ ಬಂಧುಗಳಿಗೆ ಹಾಗೂ ಸ್ನೇಹಿತರಿಗೆ ಬರೆಯುವ ಪತ್ರಗಳನ್ನು 'ವೈಯಕ್ತಿಕ ಪತ್ರಗಳು/ ಕೌಟುಂಬಿಕ ಪತ್ರಗಳು/ ಖಾಸಗಿ ಪತ್ರಗಳು' ಎನ್ನುವರು. ಈ ಬಗೆಯ ಪತ್ರಗಳನ್ನು ಬರೆಯುವ ರೀತಿಯೇ ಬೇರೆಯಾಗಿರುತ್ತದೆ.
**2. ವ್ಯಾವಹಾರಿಕ ಪತ್ರಗಳು–** ವ್ಯಾವಹಾರಿಕ ದೃಷ್ಟಿಯಿಂದ ಬರೆಯುವ ಪತ್ರಗಳು ವ್ಯವಹಾರಿಕ ಪತ್ರಗಳು. ಇವುಗಳಲ್ಲಿ ಮನವಿ ಪತ್ರಗಳು, ಆಡಳಿತ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು, ಜಾಹೀರಾತುಗಳು, ಪ್ರಕಟಣೆಗಳು, ಪತ್ರಿಕಾ ವರದಿಗಳು, ಮೊದಲಾದ ವಿಧಗಳನ್ನು ಕಾಣಬಹುದಾಗಿದೆ.
**ಪತ್ರದ ಪ್ರಾರಂಭಿಕ ಒಕ್ಕಣಿಕೆ–** ಪತ್ರದ ಮೇಲಿನ ಎಡ ಭಾಗದಲ್ಲಿ ಪತ್ರ ಬರೆಯುವವರ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಬಲಭಾಗದಲ್ಲಿ ದಿನಾಂಕ ಮತ್ತು ಸ್ಥಳವನ್ನು ಬರೆಯಬೇಕು. ನಂತರ ಎಡಭಾಗದಲ್ಲಿ ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ಸಂಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಇದರ ಕೆಳಭಾಗದಲ್ಲಿ ಸೂಕ್ತ ಸಂಭೋಧನೆಯನ್ನು ಬರೆಯಬೇಕು. ಪತ್ರದ ವಿಷಯವನ್ನು ಸರಳವಾಗಿ, ನೇರವಾಗಿ ಒಂದು ವಾಕ್ಯದಲ್ಲಿ ಸ್ಪಷ್ಟವಾಗಿ ಬರೆಯಬೇಕು.
**ಪತ್ರದ ಒಡಲು–** ಪತ್ರದ ಒಡಲು ಎಂದರೆ ಪತ್ರ ಬರೆದ ಉದ್ದೇಶದ ವಿವರಣೆ. ಪತ್ರ ಬರೆದ ವಿಷಯವನ್ನು ಕುರಿತು ಅರ್ಥವಾಗುವಂತೆ ಸರಳಳವಾದ ಶೈಲಿಯಲ್ಲಿ ವಿವರವಾಗಿ, ಸಂಕ್ಷಿಪ್ತವಾಗಿ ಬರೆಯಬೇಕು. ವಿಷಯಗಳು ಬೇರೆ ಬೇರೆ ಇದ್ದಾಗ ಕಂಡಿಕೆಗಳಾಗಿ ವಿಂಗಡಿಸಿ ಬರೆಯಬೇಕು.
**ಪತ್ರದ ಮುಕ್ತಾಯ–** ವಂದನೆಗಳೊಡನೆ ಪತ್ರದ ಮುಕ್ತಾಯ ಮಾಡಬೇಕು. ಪತ್ರದ ಬಲಭಾಗದ ಕೊನೆಯಲ್ಲಿ ನಮ್ಮ ನಂಬುಗೆಯ/ ತಮ್ಮ ವಿಶ್ವಾಸಿ ಬರೆದು, ಅದರ ಕೆಳಗೆ ಪತ್ರ ಬರೆದವರು ಸಹಿಯನ್ನು ಮಾಡಬೇಕು. ಕೊನೆಯಲ್ಲಿ' ಹೊರವಿಳಾಸ' ಅಂದರೆ' ಇಂದ, ಹಾಗೂ 'ಇವರಿಗೆ, ವಿಳಾಸ ಬರೆಯಬೇಕು.
ಪತ್ರ ಬರೆಯುವುದು ಒಂದು ಕಲೆ. ನಾವು ಬರೆದ ಪತ್ರವು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಪತ್ರದಲ್ಲಿ ಕಾಗುಣಿತ ದೋಷ, ವ್ಯಾಕರಣ ದೋಷಗಳು ಇರಬಾರದು." ಬರವಣಿಗೆ ಅಂದವಾಗಿಯೂ, ಅರ್ಥಪೂರ್ಣವಾಗಿಯೂ, ಸರಳವಾಗಿಯೂ ಇದ್ದರೆ ಓದುವವರ ಮನಸ್ಸು ಉಲ್ಲಾಸ ಗೊಳ್ಳುತ್ತದೆ" ಎಂಬುದನ್ನು ಮರೆಯಬಾರದು. ಹಿರಿಯರು, ಪ್ರಸಿದ್ಧ ವ್ಯಕ್ತಿಗಳು ಬರೆದ ಪತ್ರಗಳನ್ನು ಅಧ್ಯಯನ ಮಾಡಿ, ಪತ್ರ ಬರೆಯುವ ವಿಧಾನಗಳನ್ನು ಕರಗತ ಮಾಡಿಕೊಳ್ಳಬೇಕು.

**ಮಾದರಿ ವ್ಯಾವಹಾರಿಕ ಪತ್ರ**

ಇಂದ,
ದಿನಾಂಕ –
ಸ್ಥಳ –
------------------
------------------
ಇವರಿಗೆ
------------------
------------------
ಮಾನ್ಯರೇ,
ವಿಷಯ:– --------------
----------------------------------------
----------------------------------------.
ಗೌರವ ವಂದನೆಗಳೊಂದಿಗೆ,
ಇಂತಿ ತಮ್ಮ ವಿಶ್ವಾಸಿ.
ಹೊರವಿಳಾಸ
ಇಂದ,
------------------
ಇವರಿಗೆ,
------------------


www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

# ಕಾಡುಗೊಲ್ಲರಿಗೆ ಪ್ರಮಾಣಪತ್ರ ವಿತರಣೆ

## ಶಾಸಕ ಎನ್.ಟಿ.ಶ್ರೀನಿವಾಸ ಹೇಳಿಕೆ । ಆಧುನಿಕತೆ ಅಳವಡಿಸಿಕೊಂಡು ಬದುಕನ್ನು ಕಟ್ಟಿಕೊಳ್ಳಿ




■ **ಹಂಪಿ ಟೈಮ್ಸ್ ಕೂಡ್ಲಿಗಿ**

ಬುಡಕಟ್ಟು ಸಂಸ್ಕೃತಿಯನ್ನು ಹೊಂದಿರುವ ಕಾಡು ಗೊಲ್ಲರು ಈ ಹಿಂದುಳಿದ ತಾಲೂಕಿನಲ್ಲಿದ್ದಾರೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ಪಟ್ಟಣದ ಮಹದೇವ ಮೈಲಾರ ಕ್ರೀಡಾಂಗಣದ 76 ನೇ ಗಣರಾಜ್ಯೋತ್ಸವ ವೇದಿಕೆಯಲ್ಲಿ "ಕಾಡುಗೊಲ್ಲರ" ಪ್ರಮಾಣ ಪತ್ರವನ್ನು ವಿತರಿಸಿ ಮಾತನಾಡಿದರು. ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದೂ, ಇನ್ನೂ ಹಟ್ಟಿಗಳನ್ನು ಕಟ್ಟಿಕೊಂಡು ಬುಡುಕಟ್ಟ ಸಂಸ್ಕೃತಿಯನ್ನು ಹೊಂದಿರುವುದು ಅತ್ಯಂತ ವಿಷಾಧನೀಯ ಸಂಗತಿಯಾಗಿದೆ ಎಂದರು. ಬುಡಕಟ್ಟು ಜನಾಂಗದವರಿಗೆ ಸಿಗಬೇಕಾದ ಸೌಲಭ್ಯಕ್ಕಾಗಿ ಈ ಸಮುದಾಯವು ನಿರಂತರ 50ವರ್ಷಗಳಿಂದಲೂ, ಹೋರಾಟ ನಡೆಸಿಕೊಂಡು ಬರುತ್ತಿದೆ. ಸುಧೀರ್ಘ ಹೋರಾಟದ ಫಲವಾಗಿ, ಸರ್ಕಾರವು ಕಾಡು ಗೊಲ್ಲ ಸಮುದಾಯವನ್ನು ಜಾತಿ ಪಟ್ಟಿಯಲ್ಲಿ ಸೇರಿಸಿರುವುದರಿಂದ "ಕಾಡು ಗೊಲ್ಲ" ಪ್ರಮಾಣ ಪತ್ರವನ್ನು ನೀಡಲು ಸಾಧ್ಯವಾಗಿದೆ ಎಂದು ಹೇಳಿದರು.

ಸರ್ಕಾರದ ಸೌಲಭ್ಯಗಳನ್ನು ಪಡೆಯಲು ತಾಲೂಕಿನಾದ್ಯಂತ ಕಾಡು ಗೊಲ್ಲರು ತಹಶೀಲ್ದಾರ್ ಕಚೇರಿಯಲ್ಲಿ ನೀಡುವ ಪ್ರಮಾಣ ಪತ್ರವನ್ನು ಪಡೆಯಬೇಕೆಂದು ತಿಳಿಸಿದರು. ನಾಗರಿಕತೆಯ ಜೀವನ ಬದಲಾಗಿದೆ. ಆಧುನಿಕತೆಯನ್ನು ಅಳವಡಿಸಿ ಕೊಂಡು ಸಮಾಜದಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದರು. ಇನ್ನೂ ಕಂದಾಚಾರಗಳು, ಮೂಢನಂಬಿಕೆಗಳನ್ನು ತೊರೆದು, ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು. ಅನಿಷ್ಠ ಪದ್ಧತಿಗಳಾದ ಬಾಲ್ಯ ವಿವಾಹ, ಹೆಣ್ಣು ಮಕ್ಕಳ ಸಹಜ ಕ್ರೀಯೆ ಋತುಚಕ್ರ ಸಮಯದಲ್ಲಿ ಗ್ರಾಮದ ಹೊರಗಡೆ ತಡಿಕೆಯನ್ನು ಕಟ್ಟಿ ಒಬ್ಬಂಟಿಯಾಗಿಡುವ ಗೊಡ್ಡುಸಂಪ್ರಾದಯಗಳನ್ನು ಅನುಸರಿಸದಿರುವಂತೆ ಜಾಗೃತಿ ಮೂಡಿಸಿದರು. ಒಬ್ಬ ತಜ್ಞ ವೈದ್ಯನಾಗಿಯೂ, ನಿಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಬದಲಾದ ಕಾಲಘಟ್ಟದಲ್ಲಿ ಇನ್ನೂ ಹಳೆಯ ಪದ್ಧತಿಗಳನ್ನು ಅನುಸರಿಸಬೇಡಿ, ಇವುಗಳನ್ನು ತೊರೆಯುವಂತೆ ತಿಳಿಸಿದರು.

ಸಾಂಕೇತಿಕವಾಗಿ ಕೆಲವರಿಗೆ ಕಾಡು ಗೊಲ್ಲ ಪ್ರಮಾಣ ಪತ್ರಗಳನ್ನು ಸಮುದಾಯಕ್ಕೆ ವಿತರಿಸಿದರು. ತಹಶೀಲ್ದಾರ್ ಎಂ. ರೇಣುಕಾ, ಗ್ರೇಡ್–2 ತಹಶೀಲ್ದಾರ್ ವಿ.ಕೆ.ನೇತ್ರಾವತಿ, ಜಿಲ್ಲಾ ಕಾಡು ಗೊಲ್ಲ ಸಂಘದ ಅಧ್ಯಕ್ಷ ಎಸ್. ಸಣ್ಣಬಾಲಪ್ಪ, ತಾಲೂಕು ಅಧ್ಯಕ್ಷ ದೊಡ್ಡಪ್ಪ, ಡಿ.ಬಿ. ಚಿತ್ತಪ್ಪ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ, ಹಿರೇಕುಂಬಳಗುಂಟೆ ಉಮೇಶ್ ಸೇರಿದಂತೆ ಅನೇಕರಿದ್ದರು.

# ಗರ್ಭಿಣಿಯರಲ್ಲಿ ರಕ್ತಹೀನತೆ ಇದ್ದಲ್ಲಿ ನಿರ್ಲಕ್ಷಿಸಬೇಡಿ

**ಮೊದಲ ಪುಟದಿಂದ**

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ ಎಂದು ಅವರು ತಿಳಿಸಿದರು.

ನಿಮ್ಮ ವೃತ್ತಿಯೊಂದಿಗೆ ಮನೆಯಲ್ಲಿನ ಗರ್ಭಿಣಿಯ ಆರೈಕೆಗೆ ಆದ್ಯತೆ ನೀಡಬೇಕು. ಆರೋಗ್ಯ ಇಲಾಖೆಯಿಂದ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಊಟವಾದ ಒಂದು ಗಂಟೆಯ ನಂತರ ತಪ್ಪದೇ ನುಂಗಿಸಬೇಕು. ಕಬ್ಬಿಣಾಂಶ ಮಾತ್ರೆ ನುಂಗಿದರೆ, ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆಗಳನ್ನು, ಗಾಳಿಸುದ್ದಿಗಳನ್ನು ನಂಬಬಾರದು. ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಟ 180 ಸೇವಿಸಬೇಕು ಎಂದು ಅವರು ವಿನಂತಿಸಿದರು.

ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಅಂದರೆ ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್, ಮುಂತಾದ ಕಾರಣಗಳಿದ್ದರೆ ನಿರ್ಲಕ್ಷಿಸಬಾರದು. ಅಲ್ಲದೆ ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಾದ (ಐಎಫ್ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ತಪ್ಪದೇ ಕಳುಹಿಸಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು ಎಂದು ಹೇಳಿದರು.

*ಪೌಷ್ಠಿಕ ಆಹಾರ ತಪ್ಪದೆ ನೀಡಿ:*

ಗರ್ಭಿಣಿ ಮಹಿಳೆಯರಿಗೆ ಮೊಳಕೆ ಕಾಳು, ಹಸಿರು ತಪ್ಪಲು ಪಲ್ಯ ಮೊಟ್ಟೆ, ಮೀನು, ಸಾಂಸ್ಕೃತಿಕವಾಗಿ ಒಪ್ಪಿದರೆ ಮಾಂಸಹಾರಿ ಊಟ, ಋತುಮಾನದ ಹಣ್ಣುಗಳನ್ನು ತಪ್ಪದೇ ಕೊಡಬೇಕು. ಇದಕ್ಕೆ ಬೆಂಬಲವಾಗಿ ಈಗಾಗಲೇ ಪ್ರತಿ 9 ಹಾಗೂ 24 ತಾರೀಖುಗಳಂದು ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಯೊಂದಿಗೆ ಪೌಷ್ಠಿಕತೆ ಇರುವ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

*ರಕ್ತ ಶೇಖರಣಾ ಘಟಕ ಆರಂಭ:*

ಗರ್ಭಿಣಿ ಸೇರಿದಂತೆ ಇತರರಿಗೆ ರಕ್ತದ ಅವಶ್ಯಕತೆ ಇದ್ದರೆ ಒದಗಿಸಲು ಮೋಕಾ, ಕುರುಗೋಡು, ಕಂಪ್ಲಿ, ತೋರಣಗಲ್ಲು ಆರೋಗ್ಯ ಕೇಂದ್ರಗಳಲ್ಲಿ ರಕ್ತ ಶೇಖರಣಾ ಘಟಕ ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ತಿಳಿಸಿದರು.

*ಹೆರಿಗೆ ದಿನಾಂಕ 3 ದಿನ ಮೊದಲು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ:*

ಹೆರಿಗೆಗೆ ನಿರೀಕ್ಷಿತ ದಿನಾಂಕದ 3 ದಿನ ಮೊದಲು ಗರ್ಭಿಣಿಯರು ಅದರಲ್ಲೂ ಗಂಡಾಂತರಕಾರಿ ಲಕ್ಷಣಗಳುಳ್ಳವರು ತಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಸರಳ ಹೆರಿಗೆಯ ಅವಕಾಶಗಳಿಗೆ ಬೆಂಬಲಿಸಬೇಕು ಎಂದು ಕೋರಿದರು.

*ಮಕ್ಕಳ ಜನನದ ಮಧ್ಯ ಅಂತರಕ್ಕಾಗಿ ತಾತ್ಕಾಲಿಕ ವಿಧಾನ ಬಳಸಿ:*

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ್–ಟಿ, ನೀರೊಧ್ ಬಳಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಸಿರುಗುಪ್ಪ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಸವರಾಜ್ ದಮ್ಮೂರ್, ಜಿಲ್ಲಾ ಆರೋಗ್ಯ ಶಿಕ್ಷಣಾದಿಕಾರಿ ಈಶ್ವರ ಹೆಚ್ ದಾಸಪ್ಪನವರ, ಅಂಗನವಾಡಿ ಸಹಾಯಕಿಯರು, ಸ್ಥಳೀಯರಾದ ಅಶೋಕ, ಕಾಸಿಮ್, ಹುಸೇನ್, ಶಿವಶಂಕರ ಉಪಸ್ಥಿತರಿದ್ದರು.

# ಜ್ಞಾನಕ್ಕಿಂತ ದೊಡ್ಡ ಸಂಪತ್ತು ಇನ್ನೊಂದಿಲ್ಲ

## ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿಕೆ । ದತ್ತಿ ಉಪನ್ಯಾಸ




■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕೇವಲ ಒಂದು ದಿನ ಮಾತ್ರ ಕನ್ನಡದ ಬಗ್ಗೆ ಕಾಳಜಿ ತೋರಿಸದೆ ಪ್ರತಿದಿನ ಕನ್ನಡತನ ಮೆರೆಯಲು ಮುಂದಾಗೋಣ ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜ್ ಸಭಾಂಗಣದಲ್ಲಿ ಸೋಮವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಡೀ ದೇಶದ ಭಾಷೆಗಳಲ್ಲಿ ಕನ್ನಡ ಅತ್ಯಂತ ಶ್ರೇಷ್ಠ ಭಾಷೆಯಾಗಿದೆ. ಪ್ರಾಚೀನ ಇತಿಹಾಸ ಹೊಂದಿರುವ ನಮ್ಮ ಕನ್ನಡ ಭಾಷೆ ಸುಲಿದ ಬಾಳೆ ಹಣ್ಣಿನಷ್ಟೇ ಸುಲಭವಾಗಿದೆ. ಕನ್ನಡಕ್ಕಾಗಿ ನಾವೆಲ್ಲ ಕೈ ಎತ್ತೋಣ ಕನ್ನಡ ತಾಯಿಯ ಸೇವೆ ಮಾಡಲು ಮುಂದಾಗೋಣ ಎಂದರು.

ಚಿಕ್ಕೋಬನಹಳ್ಳಿ ಶ್ರೀಮತಿ ಶಂಕ್ರಮ್ಮ ದತ್ತಿ ವಿಷಯ, ಕೃಷಿ ಕ್ಷೇತ್ರದಲ್ಲಿನ ಬದಲಾವಣೆ ಕುರಿತು ಸರ್ಕಾರಿ ನೌಕರರ ಸಂಘದ ನಿಕಟ ಪೂರ್ವ ಅಧ್ಯಕ್ಷ ಪಿ.ಶಿವರಾಜ್ ಮಾತನಾಡಿ, ಪಾರಂಪರಿಕ ಪದ್ದತಿಯಿಂದ ಕೃಷಿ ಈಗ ಔದ್ಯೋಗಿಕವಾಗಿ ಬದಲಾವಣೆಯಾಗಿದೆ. ನಮ್ಮ ಪೂರ್ವಿಕರು ಪಾರಂಪರಿಕ ಪದ್ದತಿಯನ್ನು ಅನುಸರಿಸಿ ಕೃಷಿ ಮಾಡಿ ಜೀವನೋಪಾಯ ಮಾಡುತ್ತಿದ್ದರು. ಬದಲಾದ ಸನ್ನಿವೇಶದಲ್ಲಿ ಕೃಷಿ ಯಂತ್ರೋಪಕರಣಗಳು ಬಂದ ನಂತರ ಹೊಸ ಆವಿಷ್ಕಾರಗಳು ನಡೆದು ಕೃಷಿಯಲ್ಲಿ ಅಭೂತಪೂರ್ವ ಬದಲಾವಣೆ ಕಂಡಿದ್ದೇವೆ. ಇದರಿಂದಾಗಿ ಕೃಷಿ ಇಂದು ಉದ್ಯಮವಾಗಿ ಮಾರ್ಪಾಡು ಆಗಿದೆ. ಕುರಿ,ಕೋಳಿ ಸಾಕಾಣಿಕೆ, ಕ್ಷೀರ ಉತ್ಪಾದನೆ ಸೇರಿದಂತೆ ನೂರಾರು ತಳಿಗಳ ಬೀಜ ಆವಿಷ್ಕಾರಗಳು ಬಂದ ಮೇಲೆ ರೈತನ ಆದಾಯ ದುಪ್ಪಟ್ಟು ಆಗಿದೆ ಎಂದು ತಿಳಿಸಿದರು. ಆದರೂ ಸರ್ಕಾರಗಳು ರೈತನು ಬೆಳೆದ ಬೆಳೆಗಳಿಗೆ ನಿರೀಕ್ಷಿತ ಬೆಲೆ ಇಲ್ಲದೆ ಆತ್ಮಹತ್ಯೆಗಳು ನಡೆಯುತ್ತಿರುವುದು ವಿಷಾದನೀಯ ಎಂದರು.

ಶ್ರೀಮತಿ ರುದ್ರಮ್ಮ ವಾಮದೇವ ಶಿವಾಚಾರ್ಯ ದತ್ತಿ ವಿಷಯ, ಸಮಾಜ ಬದಲಾವಣೆಯಲ್ಲಿ ಶಿಕ್ಷಕರ ಪಾತ್ರ ಕುರಿತು ಸಪಾಪೂ ಕಾಲೇಜು ಪ್ರಭಾರಿ ಪ್ರಾಚಾರ್ಯ ಜೆ.ವೆಂಕಟೇಶ ಮಾತನಾಡಿದರು. ಇದೇ ಸಂಧರ್ಭದಲ್ಲಿ ಬಯಲಾಟ ರಾಜ್ಯ ಪ್ರಶಸ್ತಿ ಪುರಸ್ಕೃತೆ ಬಿ.ಗಂಗಮ್ಮ ಇವರನ್ನು ಸನ್ಮಾನ ಮಾಡಲಾಯಿತು.

ಪಪಂ ಸದಸ್ಯೆ ಲಕ್ಷ್ಮೀದೇವಿ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಉದಯ ಜನ್ನು, ಕಸಾಪ ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ಅಧ್ಯಕ್ಷ ಕೆ.ಎಂ.ವೀರೇಶ್, ರಿಯಾಜ್ ಪಾಷಾ, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಚ್.ಎಂ.ವೀರಭದ್ರಯ್ಯ, ಉಪನ್ಯಾಸಕರಾದ ಕೆ.ಎಚ್.ಎಂ.ಕೊಟ್ರಮ್ಮ, ಹೆಗ್ಗಪ್ಪಹಳ್ಳಿ, ನಾಗರಾಜ ಕೊಟ್ರಪ್ಪನವರ ಇದ್ದರು.

# ಶಾಲಾ ಮಕ್ಕಳೊಂದಿಗೆ ಬಿಸಿಯೂಟ ಸವಿದ ಜಿಲ್ಲಾ ಪಂಚಾಯತಿ ಸಿಇಓ

■ **ಹಂಪಿ ಟೈಮ್ಸ್ ಕೊಪ್ಪಳ**

ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಒಗ್ಗೂಡಿಸುವಿಕೆ ಮೂಲಕ ಅನುಷ್ಠಾನಿಸುತ್ತಿರುವ ಶಾಲಾ ಶೌಚಾಲಯ ಕಾಮಗಾರಿಗಳನ್ನು ಗುಣಮಟ್ಟದಿಂದ ಅನುಷ್ಠಾನಿಸಿರೆಂದು ಜಿಪಂ ಸಿಇಓ ರಾಹುಲ್ ರತ್ನಂ ಪಾಂಡೆಯ ಕರೆ ನೀಡಿದರು.

ಸೋಮವಾರ ಕೊಪ್ಪಳ ತಾಲೂಕಿನ ಹಾಲವರ್ತಿ, ಗಿಣಿಗೇರಾ ಹಾಗು ಚಿಕ್ಕಬೊಮ್ಮನಾಳ ಗ್ರಾಮ ಪಂಚಾಯತಿಗಳಲ್ಲಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಪರಿಶೀಲಿಸಿದರು.



ಶಾಲಾ ಮಕ್ಕಳೊಂದಿಗೆ ಕುಳಿತು ಬಿಸಿಯೂಟ ಸವಿದ ಜಿಲ್ಲಾ ಪಂಚಾಯತಿ ಸಿಇಓ: ಚಿಕ್ಕಬೊಮ್ಮನಾಳ

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಮೊಟ್ಟೆ, ಬಾಳೆಹಣ್ಣು, ಆಹಾರ ವಿತರಣೆ ಕುರಿತು ಚರ್ಚಿಸಿದರು. ಮಕ್ಕಳಿಗೆ ಸ್ವಚ್ಛತೆಯ ಕುರಿತು ಪಾಠ ಮಾಡಿದರು. ಎಲ್ಲಾ ಮಕ್ಕಳು ತಮ್ಮ ಮನೆಯಲ್ಲಿರುವ ಶೌಚಾಲಯ ಕಡ್ಡಾಯವಾಗಿ ಬಳಕೆ ಮಾಡುವಂತೆ ಕರೆ ನೀಡಿದರು.ಶಾಲೆಯ ಆವರಣದಲ್ಲಿದ್ದ ಕೂಸಿನ ಮನೆಗೆ ಭೇಟಿ ಕೂಸಿನ ಮನೆಯ ದಾಖಲಾತಿಗಳನ್ನು ಪರಿಶೀಲಿಸಿದರು. ಮಕ್ಕಳಿಗೆ ಆಹಾರ ವಿತರಣೆ ಕುರಿತು ಕೆರ್ ಟೆಕರ್ ಮಾಹಿತಿ ನೀಡಿದರು.

**ಮೈಕ್ರೋ ನ್ಯೂಸ್**

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ; ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನ ಪ್ರಾರಂಭಿಸಿರುವ (ದಿನಾಂಕ:10–01–2024 ಮತ್ತು ಅದರ ನಂತರ ಪ್ರಥಮ ವರ್ಷದ ಪಿಹೆಚ್‌ಡಿ ಪ್ರಾರಂಭಿಸಿರಬೇಕು) ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಹಾಗೂ 3ಬಿ ಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಫೆ.10 ರವರೆಗೆ ವಿಸ್ತರಿಸಲಾಗಿದೆ.

ರಾಜ್ಯ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ ಮತ್ತು ಅದರ ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿಹೆಚ್‌ಡಿ ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆಫ್–ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. 2024–25ರ ಆರ್ಥಿಕ ವರ್ಷವು ಮುಕ್ತಾಯಗೊಳ್ಳುತ್ತಿರುವುದರಿಂದ ಅರ್ಜಿ ಸಲ್ಲಿಸುವ ದಿನಾಂಕವನ್ನು ಪುನಃ ವಿಸ್ತರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in ಅಥವಾ ಸಹಾಯವಾಣಿ 8050770004 ಗೆ ಸಂಪರ್ಕಿಸಬಹುದು ಎಂದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಖಾಲಿ ಇರುವ 19 ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ನೇಮಕಾತಿ ಮಾಡುವ ಸಲುವಾಗಿ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ 19 ಹುದ್ದೆಗಳಿಗೆ 1:1 ಅನುಪಾತದಲ್ಲಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ಕೊಪ್ಪಳ ಜಿಲ್ಲಾ ವೆಬ್‌ಸೈಟ್ koppal.nic.in ರಲ್ಲಿ ಪ್ರಕಟಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಎಂದು ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ತಿಳಿಸಿದ್ದಾರೆ.

## ಕೊಟ್ಟೂರು ಕ್ರಿಯೇಟಿವ್ ಲೇಡಿಸ್ ಕ್ಲಬ್ 25ನೇ ವರ್ಷದ ಸಂಭ್ರಮಾಚರಣೆ

**ಮೊದಲ ಪುಟದಿಂದ**

ಡಾ.ಪ್ರೊ.ಸತೀಶ ಪಾಟೀಲ್ ಮಾತನಾಡಿದರು. ಕ್ರಿಯೇಟಿವ್ ಲೇಡಿಸ್ ಕ್ಲಬ್ ಕಾರ್ಯದರ್ಶಿ ನಿರ್ಮಲಾ ಶಿವನಗುತ್ತಿ ಪ್ರಸ್ತಾವಿಕವಾಗಿ ಮಾತನಾಡಿದರು.ಕ್ಲಬ್ ನ ಅಧ್ಯಕ್ಷ ಸುನಂದಾ ಗುರುಬಸವರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ವೇದಿಕೆಯಲ್ಲಿ ಪಪಂ ಅಧ್ಯಕ್ಷೆ ಬದ್ದಿ ರೇಖಾ ರಮೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಕ್ಕಳಿಂದ ಹಾಗೂ ಕ್ಲಬ್ ಸದಸ್ಯರಿಂದ ಸಾಂಸ್ಕೃತಿಕ ಚಟುವಟಿಕೆಗಳು ,ನೃತ್ಯಗಳು ನೋಡುಗರನ್ನು ಆಕರ್ಷಿಸಿ, ಆನಂದಿಸಿದವು. ಕಾರ್ಯಕ್ರಮದಲ್ಲಿ

ಕೊಟ್ಟೂರಿನ ಕ್ರಿಯೇಟಿವ್ ಲೇಡಿಸ್ ಕ್ಲಬ್ ಸರ್ವ ಸದಸ್ಯರು ಪಾಲ್ಗೊಂಡಿದ್ದರು, ಅನುರಾದ ಕೊಟ್ರೇಶ್ ಸ್ವಾಗತಿಸಿದರು. ಭಾಗೀರತಿ ಪಿಯು ಕಾಲೇಜ್ ವಿದ್ಯಾರ್ಥಿನಿ ನಿರೂಪಿಸಿದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ, ಪತ್ರಿಕೆಗಾಗಿ ಪತ್ರಿಕೆ ವಿತರಕರನ್ನು ಸಂಪರ್ಕಿಸಿ
ಇ–ಪೇಪರ್‌ಗಾಗಿ ಭೇಟಿ ನೀಡಿ.
www.epaper.hampitimes.com

## ದೆಹಲಿಯ ಗಣರಾಜ್ಯೋತ್ಸವ–2025 ಲಕ್ಕುಂಡಿ ಸ್ತಬ್ಧಚಿತ್ರಕ್ಕೆ ಓಟ್ ಮಾಡಿ ಆಯುಕ್ತ ಹೇಮಂತ್ ನಿಂಬಾಳ್ಕರ್ ಮನವಿ

■ **ಹಂಪಿ ಟೈಮ್ಸ್ ಬಳ್ಳಾರಿ**



ದೆಹಲಿಯಲ್ಲಿ ಜನವರಿ 26 ರಂದು ನಡೆದ 76ನೇ ಗಣರಾಜ್ಯೋತ್ಸವದ ಅಂಗವಾಗಿ ಪಥ ಸಂಚಲನದಲ್ಲಿ ಭಾಗವಹಿಸಿದ್ದ ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಜನಾಭಿಪ್ರಾಯ ಆಧರಿಸಿ ಪ್ರಶಸ್ತಿಗೆ ಪರಿಗಣಿಸಲು ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯವು ಆನ್‌ಲೈನ್ ನಲ್ಲಿ ಓಟ್ ಮಾಡಲು ಅವಕಾಶ ಕಲ್ಪಿಸಿದೆ. ಈ ಬಾರಿ ಕರ್ನಾಟಕವು 'ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು' ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿತ್ತು. ಅಪಾರ ಜನರ ಮೆಚ್ಚುಗೆಗೆ ಪಾತ್ರವಾಗಿರುವ ನಮ್ಮ ರಾಜ್ಯದ ಸ್ತಬ್ಧಚಿತ್ರವನ್ನು ಓಟ್ ಮಾಡಿ ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರು ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ಅತ್ಯುತ್ತಮ ಸ್ತಬ್ಧಚಿತ್ರದ ಆಯ್ಕೆಗಾಗಿ ಸಾರ್ವಜನಿಕರು ಆನ್ ಲೈನ್, ಇಮೇಲ್ ಮತ್ತು ಎಸ್‌ಎಂಎಸ್ ಮೂಲಕ ಓಟ್ ಮಾಡಲು ಅವಕಾಶ ಕಲ್ಪಿಸಿದೆ. ಜನವರಿ 28ರ ಮಧ್ಯರಾತ್ರಿ 12ರ ವರೆಗೆ ಓಟ್ ಮಾಡಲು ಅವಕಾಶವಿದೆ. ಸಾರ್ವಜನಿಕರು ನಿಗದಿತ ಅವಧಿಯೊಳಗೆ ಓಟ್ ಮಾಡಿ ರಾಜ್ಯದ ಸ್ತಬ್ಧಚಿತ್ರವನ್ನು ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಓಟ್ ಮಾಡುವ ವಿಧಾನದ ಬಗ್ಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕಿರುಚಿತ್ರವನ್ನು ಸಹ ಬಿಡುಗಡೆಗೊಳಿಸಿದೆ. ಇದನ್ನು ಅನುಸರಿಸಿ, Lakkundi Cradle of stone Craft ವಿಷಯದ ಸ್ತಬ್ಧಚಿತ್ರಕ್ಕೆ ಹೆಚ್ಚು ಹೆಚ್ಚು ಓಟ್ ಮಾಡುವ ಮೂಲಕ ಬೆಂಬಲ ಹಾಗೂ ಮೆಚ್ಚುಗೆ ಸೂಚಿಸಬೇಕೆಂದೂ ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

https://www.mygov.in/group-poll/vote-your-favourite-tableau-and-marching-contingent-republic-day-parade-2025/ ಕೊಂಡಿಯನ್ನು ಕ್ಲಿಕ್ ಮಾಡಿ, Login to participate ಮೇಲೆ ಕ್ಲಿಕ್ ಮಾಡಿ, ತಮ್ಮ ನೋಂದಾಯಿತ ಮೊಬೈಲ್ ನಂಬರ್ ಅಥವಾ ಇಮೇಲ್ ವಿವರ ನಮೂದಿಸಿ, ತಾವು ಸ್ವೀಕರಿಸುವ ಒಟಿಪಿ ನಮೂದಿಸಿ, ನಂತರ ರಿಸೆಂಡ್.ಓಟಿಪಿ/ಸಬ್‌ಮಿಟ್ಟೆಡ್ ಇದರಲ್ಲಿ ಸಬ್‌ಮಿಟ್ ಕ್ಲಿಕ್ ಮಾಡಿ, ಎಲ್ಲಾ ಸ್ತಬ್ಧಚಿತ್ರಗಳ ಮಾಹಿತಿ ಕಾಣುತ್ತದೆ. Lakkundi : cradle of stone craft ಕ್ಲಿಕ್ ಮಾಡಿ ತಮ್ಮ ಮತವನ್ನು ದಾಖಲಿಸಬಹುದು.

ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ MYGOVPOLL 357037,12 ಟೈಪ್ ಮಾಡಿ 7738299899 ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಓಟ್ ಮಾಡಬಹುದಾಗಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com